# ಗಾಂಧಿ ವಿರುದ್ಧ ಲೆನಿನ್

ಎಸ್ ಎ ಡಾಂಗೆ

*"ಕಂದಾಯವನ್ನು ಸಂಗ್ರಹಿಸುವ ಕೆಲಸದಲ್ಲಿ ನಾವು ಸರ್ಕಾರಕ್ಕೆ ನೆರವು ನೀಡುವುದು ಬೇಡ. ಅವರು ನ್ಯಾಯಾಂಗದ ಅಧಿಕಾರವನ್ನು ನಡೆಸಿಕೊಂಡು ಹೋಗಲು ನೆರವು ನೀಡುವುದೂ ಬೇಡ. ನಾವು ನಮ್ಮದೇ ಆದ ನ್ಯಾಯಾಲಯಗಳನ್ನು ಮಾಡಿ ಕೊಳ್ಳೋಣ ಮತ್ತು ಕಾಲ ಕೂಡಿ ಬಂದಾಗ ನಾವು ತೆರಿಗೆಗಳನ್ನು ಕೊಡುವುದು ಬೇಡ".*

**- ಲೋಕಮಾನ್ಯ ಬಾಲಗಂಗಾಧರ ತಿಲಕ್**

(1906)

**ನನ್ನದೇ ಆದ ಮುನ್ನುಡಿ**

ಪ್ರತಿಯೊಂದು ಪುಸ್ತಕಕ್ಕೂ ಸಹ ಒಂದು ಪ್ರಸ್ತಾವನೆ ಅಥವಾ ಮುನ್ನುಡಿ ಇರಲೇಬೇಕು ಮತ್ತು ಸಾರ್ವಜನಿಕರ ಕಣ್ಣಿನಲ್ಲಿ ಬಹಳ ಮೇಲ್ಮಟ್ಟವನ್ನು ಸಾಧಿಸಿಕೊಂಡಿರುವ ಒಬ್ಬ ನಾಯಕನೋ ಅಥವಾ ಸುಪ್ರಸಿದ್ಧ ಲೇಖಕನೋ ಆ ಮುನ್ನುಡಿಯನ್ನು ಬರೆಯಬೇಕು ಎಂಬುದು ಪುಸ್ತಕವೊಂದನ್ನು ಪ್ರಕಟಿಸಲು ಪ್ರಾಥಮಿಕ ತತ್ವಗಳಾಗಿ ಬಿಟ್ಟಿವೆ. ನಮ್ಮ ಕಾಲದ ಪ್ರಕಟಣೆಗಳ ಮುನ್ನುಡಿಗಳನ್ನು ನಾವೇನಾದರೂ ವಿಶ್ಲೇಷಿಸಿದರೆ ಅವು ಈ ಕೆಳಕಂಡ ವರ್ಗಗಳಿಗೆ ಸೇರುತ್ತವೆ: 1). ಪ್ರಸಕ್ತ ವಿಷಯದ ಬಗ್ಗೆ ಪುಸ್ತಕ ಒಂದನ್ನು ಬರೆಯಲು ಆ ಲೇಖಕನಿಗೆ ಇರುವ ಸಾಮರ್ಥ್ಯಗಳ ಪ್ರಶಂಸೆ ಮತ್ತು ಆ ವಿಷಯಕ್ಕೆ ಸಂಬಂಧಿಸಿದಂತೆ ಅಂತಹ ಒಂದು ಪುಸ್ತಕದ ಅಗತ್ಯತೆ ಇದೆ ಎಂಬ ಬಗ್ಗೆ ವಕಾಲತ್ತು 2). ಪ್ರಕಟಿತ ಪುಸ್ತಕದ ವಿಷಯಕ್ಕೆ ಸಂಬಂಧಿಸಿದಂತೆ ಅದರ ಸಾರಾಂಶವನ್ನು ಹೇಳುವುದು ಮತ್ತು ಒಂದೆರಡು ಸಣ್ಣಪುಟ್ಟ ಸಲಹೆಗಳನ್ನು ನೀಡುವುದು 3). ಮುನ್ನುಡಿ ಬರೆಯುತ್ತಿರುವವನು ಆ ವಿಷಯದ ಬಗ್ಗೆ ಚೆನ್ನಾಗಿ ತಿಳಿದುಕೊಂಡಿದ್ದು, ಆ ಲೇಖಕನ ಪುಸ್ತಕದ ಬಗ್ಗೆ ನಿಷ್ಪಕ್ಷಪಾತವಾದ ತೀರ್ಮಾನವನ್ನು ಹೇಳುತ್ತಾ ಅದರಲ್ಲಿ ಯಾವುದೇ ದೋಷಗಳಿದ್ದರೆ ಅವುಗಳನ್ನು ಎತ್ತಿ ತೋರಿಸುವುದು.

ಈ ಮೂರನೇ ರೀತಿಯ ಮುನ್ನುಡಿಯೊಂದಿಗೆ ಒಂದು ಒಳ್ಳೆಯ ಪುಸ್ತಕ ಹೊರಬರುವುದು ಇಂದಿನ ದಿನಗಳಲ್ಲಿ ಅಪರೂಪವಾಗಿದೆ. ಪ್ರತಿಯೊಂದು ಪುಸ್ತಕದ ಅಂಗಡಿಯಲ್ಲಿಯೂ ಸಹ ನಮ್ಮ ಕಣ್ಣಿಗೆ ರಾಚುವಂತೆ ಎಲ್ಲೆಡೆಯೂ ಕಾಣಿಸುವುದು ಅಗ್ಗವಾಗಿ ಪುಸ್ತಕಗಳನ್ನು ಮಾರುವ ದಿಢೀರ್ ಲೇಖಕರು. ಮತ್ತು ಪ್ರಾಯಶಹ ನೂರಕ್ಕೆ ತೊಂಬತ್ತರಷ್ಟು ಪ್ರಕರಣಗಳಲ್ಲಿ ಇಂದಿನ ರಾಜಕೀಯದಲ್ಲಿ ನಾನೊಬ್ಬ ದೇಶಾಭಿಮಾನಿ ನಾಯಕ ಎಂದು ಕೊಚ್ಚಿಕೊಳ್ಳುವ ಭಯಂಕರ ಭಾಷಣಕಾರನೊಬ್ಬನ ಹೆಸರನ್ನು ಪೀಠಿಕೆಯ ಲೇಖಕ ಎಂದು ಘೋಷಿಸುವ ಭಿತ್ತಿಪತ್ರಗಳು. ಸಾರ್ವಜನಿಕರ ಸದಭಿಪ್ರಾಯವನ್ನು ಗಳಿಸಿಕೊಳ್ಳಲು ಇಂಥವರ ಹೆಸರಿನಿಂದ ಸಹಾಯವಾಗಬಹುದು ಎಂದು 'ಮಹಾನ್ ನಾಯಕ'ರೊಬ್ಬರ ಹೆಸರಿನಲ್ಲಿ ಮುನ್ನುಡಿಯನ್ನು ಪಡೆದುಕೊಳ್ಳುವ ಲಾಭಕ್ಕಾಗಿ ಬಡ ಲೇಖಕನೊಬ್ಬನು ಅನುಭವಿಸುವ ತೊಂದರೆಗಳ ಬಗ್ಗೆ ಜನರಿಗೆ ಸಾಮಾನ್ಯವಾಗಿ ಗೊತ್ತಿರುವುದಿಲ್ಲ. ಕೇಂದ್ರದಲ್ಲಿರುವ ಗ್ರಹದಂತ ಆ ಲೇಖಕನ ಸುತ್ತಲೂ ತಿರುಗುವ ಕೆಳಗಿನ ಮಟ್ಟದ ಮಹಾನ್ ನಾಯಕರ

ಮೂಲಕ ಅವನು ತನ್ನ ಪರಿಚಯವನ್ನು ಮೊದಲು ಮಾಡಿಕೊಳ್ಳಬೇಕಾಗುತ್ತದೆ. ತನ್ನ ನಿಷ್ಠಾವಂತ 'ಕೇಡಿ'ಗಳಿಂದ ತಾನು ಹೀಗೆ ಸುತ್ತುವರೆಯಲ್ಪಟ್ಟಿದ್ದೇನೆ ಎಂಬುದು ಆ 'ದೊಡ್ಡ ಮನುಷ್ಯ'ನಿಗೆ ಕೆಲವೊಮ್ಮೆ ಗೊತ್ತಿರುವುದೇ ಇಲ್ಲ. ತನ್ನ ಪರಿಚಯ ಮಾಡಿಕೊಂಡ ಮೇಲೆ ಬಡಪಾಯಿಯಾದ ಈ ಮುನ್ನುಡಿಯ ಭಿಕ್ಷಾರ್ಥಿಯು, ಈ ವಿಷಯದ ಬಗ್ಗೆ ಅಭಿಪ್ರಾಯವನ್ನು ಕೊಡುವಂತಹ ಸಾಮರ್ಥ್ಯವಿರುವುದು ಆತನಿಗೆ ಮಾತ್ರ ಹಾಗೂ ಜನತೆಯು ಆತನ ಅಭಿಪ್ರಾಯಗಳನ್ನು ಕೇಳಲು ಕಾತರವಾಗಿದೆ ಇತ್ಯಾದಿ ಮಾಮೂಲಿ ಶೈಲಿಯಲ್ಲಿ ಹೊಗಳಬೇಕಾಗುತ್ತದೆ. ಆನಂತರ ಆ ಮಹಾನ್ ನಾಯಕನು ದೊಡ್ಡದಾಗಿ ಮುಗುಳ್ನಗುತ್ತಾ ಆ ಪುಸ್ತಕವನ್ನು ತಾನೊಮ್ಮೆ ಓದುತ್ತೇನೆ ಎಂದು ಅನುಗ್ರಹದ ದೃಷ್ಟಿಯಿಂದ ಹೇಳುತ್ತಾನೆ. ಕೆಲವು ಕಾಲ ಬಡಪಾಯಿ ಲೇಖಕನು ತನ್ನ ಪುಸ್ತಕವನ್ನು ಆತನು ಓದುತ್ತಿರಬಹುದು ಎಂದು ಕನಸು ಕಾಣುತ್ತಾನೆ. ಆನಂತರ ಆತನಲ್ಲಿಗೆ ಮತ್ತೆ ಹೋಗಿ ಕೇಳಿದಾಗ ತಾನು ಅಪಾರ ಕೆಲಸದ ಒತ್ತಡದ ಕಾರಣದಿಂದ (ಅದು ಸಾರ್ವಜನಿಕ ಕೆಲಸವೇ ಆಗಿರುತ್ತದೆ ಮತ್ತು ನಾಯಕನಿಗೆ ರೇಸ್ ಕೋರ್ಸ್ ಗಳಿಗೆ ಹೋಗಲು ಸಮಯವಿರುವುದಿಲ್ಲ, ಆತನು ಶೇರ್ ಬಜಾರುಗಳಿಗೆ ಖಂಡಿತವಾಗಿ ಬಹಿರಂಗವಾಗಿ ಹೋಗುವುದಿಲ್ಲ ಎಂದು ನೀವು ನಂಬಬೇಕು) ಪುಸ್ತಕ ಓದಲು ಸಮಯವಾಗಿಲ್ಲ ಎಂದು ಹೇಳುತ್ತಾನೆ (ಸುಪ್ರಸಿದ್ಧ ಪ್ರೊಫೆಸರ್ ಆದ ಮರಾಠಿ ವಿದ್ವಾಂಸರೊಬ್ಬರಿಗೆ ಮುನ್ನುಡಿಯನ್ನು ಬರೆಯಲು ಸಮಯವೇ ಸಿಗದಿದ್ದಾಗ ಅವರಿಗೆ ಅಥವಾ ಅವರ ಸಮಯಕ್ಕೆ ಹಣ ತೆತ್ತು ಮುನ್ನುಡಿ ಬರೆಸಬೇಕಾಯಿತು ಎಂಬುದು ನನಗೆ ಗೊತ್ತಿದೆ). ಆದರೆ ಅವನು ಮುನ್ನುಡಿ ಬರೆಯಲು ಕಾಯುತ್ತಿದ್ದೇನೆ ಎನ್ನುತ್ತಾನೆ. ಆ ವಿಶ್ವಾಸಾರ್ಹ ದೊಡ್ಡ ಮನುಷ್ಯನು ತಾನೇ ಒಪ್ಪಿಕೊಂಡ ಸಮಯಕ್ಕೆ ಮುನ್ನುಡಿ ಬರೆಯುತ್ತಾನೆ ಎಂದು ಭಾವಿಸಿ ಪುಸ್ತಕ ಪ್ರಕಟಣೆಯ ದಿನಾಂಕವನ್ನು ಲೇಖಕನು ಪ್ರಕಟಿಸಿದ್ದರೆ ನಂತರ ಅವನು "ಅನಿವಾರ್ಯ ಕಾರಣಗಳಿಂದಾಗಿ ಪ್ರಕಟಣೆ ವಿಳಂಬವಾಗುತ್ತಿದೆ" ಎಂಬ ವಿಷಾದ ಸೂಚಕ ಹೇಳಿಕೆಯನ್ನು ಬಿಡುಗಡೆ ಮಾಡಬೇಕಾಗುತ್ತದೆ. ಮತ್ತೆ ಮತ್ತೆ ಮಹಾನ್ ನಾಯಕರ ಮನೆಯ ಬಾಗಿಲಿಗೆ ಎಡತಾಕುತ್ತಾ, ಅವರ ಭೇಟಿಯನ್ನು ಯಾಚಿಸಿ ಬಾಗಿಲಿನಿಂದಲೇ ಅವರಿಗೆ ವಿಸಿಟಿಂಗ್ ಕಾರ್ಡ್ ಕಳಿಸಿ ಕಾಯುತ್ತಾ (ಹೌದು ವಿಸಿಟಿಂಗ್ ಕಾರ್ಡ್ ಕಳಿಸಲೇಬೇಕು ಈ ದೇಶದ ಸಾಮಾನ್ಯ ಜನ ಹಾಗೆ ಸುಮ್ಮನೆ ಒಳಗೆ ನುಗ್ಗಬಾರದು! ಬಡ ರೈತರು ಸಹ ಯಾವ ಅನುಮತಿಯು ಇಲ್ಲದೆ ಒಳಗೆ ಹೋಗಿ ಮಾತನಾಡುವಷ್ಟು ಲೋಕಮಾನ್ಯ ತಿಲಕರು ಸಂಸ್ಕಾರವಂತ ನಾಯಕರಾಗಿರಲಿಲ್ಲ!) ಕಡೆಗೊಮ್ಮೆ ಮುನ್ನುಡಿ ದೊರೆತಾಗ ಅದರಲ್ಲಿ ಜನತೆಗೆ ದೇಶಾಭಿಮಾನದ ಕುರಿತು, ರಾಷ್ಟ್ರದ ಹೊಸ ಉತ್ಸಾಹದ ಬಗ್ಗೆ, ಜನರ ಜನ್ಮ ಸಿದ್ಧ ಹಕ್ಕುಗಳ ಬಗ್ಗೆ ಮತ್ತು ಸಾಯುವವರೆಗೂ ಸ್ವಾತಂತ್ರ್ಯಕ್ಕಾಗಿ ಹೋರಾಡಬೇಕಾದ ಅಗತ್ಯದ ಬಗ್ಗೆ ಒಂದು ಉಪನ್ಯಾಸ ಸಿಕ್ಕಿರುತ್ತದೆ. (ಇಂದಿನ ದಿನಗಳಲ್ಲಿ ಪ್ರತಿಯೊಬ್ಬ ಲೇಖಕನು ಸಹ ಕಡೆಯ ಪಕ್ಷ ಒಮ್ಮೆಯಾದರೂ ಖಿಲಾಫತ್ ಮತ್ತು ಪಂಜಾಬಿನ ಅನ್ಯಾಯದ ಬಗ್ಗೆ ಬರೆದಿರಲೇಬೇಕು!). ಉಜ್ವಲವಾದ ಪದಗಳ ಬಳಕೆ ಮತ್ತು ದೊಡ್ಡ ದೊಡ್ಡ ವಿಷಯಗಳನ್ನು ಹೇಳಿರುವುದರಿಂದ ಓದುಗರ ಕಣ್ಣು ಕೋರೈಸಿದಂತಾಗಿ, ಮಹಾನ್ ವ್ಯಕ್ತಿಯೊಬ್ಬನ ರುಜು ಇರತಕ್ಕಂತಹ ಆ ಲೇಖನವನ್ನು ವಾಸ್ತವದಲ್ಲಿ ಆತ ಬರೆದಿರುವುದಲ್ಲ, ಬದಲಿಗೆ ಅದೇ ಉದ್ದೇಶಕ್ಕಾಗಿಯೇ ಹಣ ಕೊಟ್ಟು ಕೆಲಸಕ್ಕೆ ಇಟ್ಟುಕೊಂಡಿರತಕ್ಕಂತಹ ಅವನ ವಿದ್ವತ್ಪೂರ್ಣ ಆಪ್ತ ಕಾರ್ಯದರ್ಶಿಯೊಬ್ಬ ಬರೆದಿರುವಂಥದ್ದು ಎಂಬುದನ್ನು ಕನಸಿನಲ್ಲೂ ಎಣಿಸಿರುವುದಿಲ್ಲ[2].

ಎಲ್ಲಾ ಪ್ರಕಟಣೆಗಳು ಹೀಗೆಯೇ ಇರುತ್ತವೆ ಎಂದು ಹೇಳುವುದು ನನ್ನ ಮಾತಿನ ಉದ್ದೇಶವಲ್ಲ. ನನ್ನ ಅಭಿಪ್ರಾಯವನ್ನು ಸರಳವಾದ ಮಾತುಗಳಲ್ಲಿ ಹೇಳಬೇಕೆಂದರೆ ಕೇವಲ ಲೇಖಕನನ್ನು ಹೊಗಳುವುದಾಗಲಿ ಅಥವಾ ಪುಸ್ತಕದ ವಿಷಯವನ್ನು ಸಂಗ್ರಹ ರೂಪದಲ್ಲಿ ಹೇಳುವುದಾಗಲಿ ಮುನ್ನುಡಿ ಎನ್ನುವ ಹಾಗಿದ್ದರೆ ಆಗ ಪುಸ್ತಕ ಒಂದಕ್ಕೆ ಮುನ್ನುಡಿ ಇಲ್ಲದಿರುವುದೇ ಲೇಸು. ಏಕೆಂದರೆ ಪುಸ್ತಕವನ್ನು ಓದುವ ಮೂಲಕ ಓದುಗನಿಗೆ ಸ್ವತಹ ಲೇಖಕನ ಬಗ್ಗೆ ಮತ್ತು ಪುಸ್ತಕದ ತಿರುಳಿನ ಬಗ್ಗೆ ಗೊತ್ತಾಗಿಯೇ ಆಗುತ್ತದೆ. ಆದರೆ ಬರವಣಿಗೆಯಲ್ಲಿ ಆಗಷ್ಟೇ ಕಾಲಿಟ್ಟಿರುವ ಹೊಸಬನೊಬ್ಬನು ಈ ಸಂಕಟಗಳನ್ನು ಅನುಭವಿಸಲೇಬೇಕು.

ಜಾನ್ಸನ್ ಅವರು ಡಾಕ್ಟರ್ ಜಾನ್ಸನ್ ಆಗಿ ಬೆಳೆಯುವುದಕ್ಕೆ ಮೊದಲು ಇಂತಹ ಯಾತನೆಯನ್ನು ಅನುಭವಿಸಿದರು ಎಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳುವುದು ಒಳ್ಳೆಯದು.

ನಾನೀಗ ನನ್ನದೇ ಮುನ್ನುಡಿಯನ್ನು ಆರಂಭಿಸುತ್ತೇನೆ. ಅಸಹಕಾರ ಚಳುವಳಿಯ ಆರಂಭದ ಕಾಲದಲ್ಲಿ ನಮ್ಮ ವಿರೋಧಿಗಳು ಆ ಚಳವಳಿಯಲ್ಲಿ ಬೋಲ್ಶೆವಿಕ್ ಚಟುವಟಿಕೆಗಳ ಲಕ್ಷಣಗಳಿವೆ ಎಂಬುದನ್ನು ತಾವು ಕಂಡುಹಿಡಿದಿರುವಂತೆ ನಟಿಸುತ್ತಾ, ಅದನ್ನು ಕೊಲ್ಲಲೆತ್ನಿಸಿದಾಗ ನಾನು ಈ ಹೊತ್ತಿಗೆಯನ್ನು ಬರೆಯಬೇಕೆಂದು ತೀರ್ಮಾನಿಸಿದೆ. ವೃತ್ತ ಪತ್ರಿಕೆಗಳ ಆರ್ಭಟದಿಂದಾಗಿ ಸೃಷ್ಟಿಯಾಗಿದ್ದ ಕೆಲವೊಂದು ದಂತ ಕಥೆಗಳನ್ನು ಬಿಟ್ಟರೆ ಸಾರ್ವಜನಿಕರಿಗೆ ಬೋಲ್ಶೆವಿಕ್ಕರ ಬಗ್ಗೆ ಏನೂ ಗೊತ್ತಿರಲಿಲ್ಲ. ಇದನ್ನು ಗಮನಿಸಿ ಅಸಹಕಾರ ಚಳುವಳಿಯ ಚಟುವಟಿಕೆಗಳು ಮತ್ತು ತಮ್ಮ ಆದರ್ಶಗಳನ್ನು ಸಾಧಿಸಲಿಕ್ಕಾಗಿ ಬೋಲ್ಶೆವಿಕ್ಕರು ಹಮ್ಮಿಕೊಳ್ಳುವ ಯೋಜನೆ, ಇವುಗಳ ನಡುವೆ ಇರತಕ್ಕಂಥ ತೀವ್ರವಾದ ವೈದೃಶ್ಯವನ್ನು ತೋರಿಸಲು ನಾನು ಈ ಹೊತ್ತಿಗೆಯನ್ನು ಬರೆಯಲು ನಿರ್ಧರಿಸಿದೆ. ಇಂತಹ ಪುಸ್ತಕ ಒಂದನ್ನು ಬರೆಯಲು ರಷ್ಯನ್ ಕ್ರಾಂತಿಯ ಬಗ್ಗೆ ಮತ್ತು ಬೋಲ್ಶೆವಿಕ್ಕರ ಬಗ್ಗೆ ಸಾಕಷ್ಟು ಸಾಹಿತ್ಯ ಸಿಗುವುದಿಲ್ಲ. ಏಕೆಂದರೆ ನಮ್ಮ ಸರ್ಕಾರವು ಈ ವಿಷಯ ಕುರಿತ ನೈಜವಾದ ಸಾಹಿತ್ಯವು ಒಳ ಪ್ರವೇಶಿಸದಂತೆ ಬಹಳಷ್ಟು ಎಚ್ಚರಿಕೆಯಿಂದ ತನ್ನ ದ್ವಾರಗಳನ್ನು ಮುಚ್ಚಿಬಿಟ್ಟಿದೆ. ದೇಶದೊಳಗೆ ಯಾವ ಸಾಹಿತ್ಯ ಪ್ರವೇಶಿಸುತ್ತದೆಯೋ ಅದನ್ನು ಬರೆದವರು ಬೋಲ್ಶೆವಿಕರನ್ನು ದ್ವೇಷಿಸುವಂಥವರು ಮತ್ತು ಸಾಮ್ರಾಜ್ಯಶಾಹಿ ಧೋರಣೆಯನ್ನು ಉಳ್ಳಂಥವರು. ಇಂತಹ ಸಂದರ್ಭದಲ್ಲಿ ಈ ವಿಷಯದ ಬಗ್ಗೆ ಆತ್ಮವಿಶ್ವಾಸದಿಂದ ಬರೆಯುವುದು ಕಷ್ಟವಾಗುತ್ತದೆ. ಆದರೆ ರಷ್ಯಾದಲ್ಲಿ ನಡೆಯುತ್ತಿರುವ ಮಹಾನ್ ಆಂದೋಲನದ ಪ್ರಾಥಮಿಕ ತತ್ವಗಳ ಕುರಿತು ಒಂದಿಷ್ಟು ತಿಳಿವಳಿಕೆಯನ್ನು ಈ ಪುಸ್ತಕದ ಮೂಲಕ ಕೊಡಲಾದರೆ ಮತ್ತು ಅದೇ ರೀತಿಯಲ್ಲಿ ಅಸಹಕಾರ ಚಳುವಳಿಯನ್ನು ಬೋಲ್ಶೆವಿಕ್ ತತ್ವದ ಜೊತೆಗೆ ಹೋಲಿಸುವವರ ಡಾಂಭಿಕತನದ ಬಗ್ಗೆ ಗೊತ್ತಾಗುವಂತಾದರೆ ಆಗ ಈ ಪುಸ್ತಕದ ಹಿಂದಿನ ನನ್ನ ಉದ್ದೇಶವು ಪೂರ್ಣವಾದಂತೆ.

ಅದೇ ರೀತಿಯಲ್ಲಿ ನನ್ನ ದೇಶವಾಸಿಗಳಿಗೆ ನಮ್ಮ ವಿಮೋಚನಾ ಹೋರಾಟದಲ್ಲಿ ನಾವು ಯಾವ ಪ್ರಮಾಣದ ತೀವ್ರಗಾಮಿತನಕ್ಕೆ ಹೋಗಬೇಕು ಎಂಬುದನ್ನು ಗುರುತಿಸುವಂತಾದರೆ ಮತ್ತು ಅದೇ ರೀತಿಯಲ್ಲಿ ಭಾರತದ ನೆಲದಲ್ಲಿ ಮತ್ತೊಂದು ಬೃಹತ್ ಪ್ರಮಾಣದ ಐರ್ಲೆಂಡ್ ದೇಶವನ್ನೇ ಸೃಷ್ಟಿಸುವಂತಹ ಸರ್ಕಾರಿ ಉಗ್ರವಾದವನ್ನು ನಿರೀಕ್ಷಿಸುವಂತಾದರೆ ಆಗ ನನ್ನ ಪ್ರಯತ್ನ ಸಾರ್ಥಕವಾದಂತೆ!

ನನ್ನ ಮುನ್ನುಡಿ ಇಲ್ಲಿಗೆ ಮುಗಿಯಿತು. ಕ್ಷಮಿಸಿ, ನಾನು ಕೊನೆಯಲ್ಲಿ ಸಂಪ್ರದಾಯದ ಪ್ರಕಾರ ಯಾರಾದರೂ ಒಬ್ಬ 'ಗೆಳೆಯನು ನನ್ನ ಪುಸ್ತಕಗಳನ್ನು ಓದಿ ಅದರ ಕರಡು ತಿದ್ದಿ ಕೊಟ್ಟದ್ದಕ್ಕಾಗಿ ನಾನು ಕೃತಜ್ಞನಾಗಿದ್ದೇನೆ" ಎಂಬ ಮಾತುಗಳನ್ನು ಸೇರಿಸಲಾರೆ; ಏಕೆಂದರೆ ಆ ಕೆಲಸವನ್ನು ನಾನೇ ಮಾಡಬೇಕಾಗಿ ಬಂತು!

ಎಸ್. ಎ. ಡಾಂಗೆ.

ಬಾಂಬೆ, ಏಪ್ರಿಲ್ 1921.

# ಪರಿವಿಡಿ


**ನನ್ನದೇ ಆದ ಮುನ್ನುಡಿ**

**ಅಧ್ಯಾಯಗಳು**

-----

1. ಪೀಠಿಕೆ

2. ಇಂದಿನ ಸಮಾಜ : ವರ್ಗ ಹೋರಾಟ

3. ಗಾಂಧಿ ವಿರುದ್ಧ ಲೆನಿನ್

4. “ಸಶಸ್ತ್ರ ಪ್ರಹಾರ”

5. ಭಾರತದ ಕ್ರಾಂತಿ

ಅನುಬಂಧ. ಎ

- —; —; ಬಿ

—;;;; — ಸಿ


***

## ಅಧ್ಯಾಯ 3

## ಗಾಂಧಿ ವಿರುದ್ಧ ಲೆನಿನ್

"ಎಲ್ಲಾ ರಷ್ಯನ್ನರ ಸರ್ವಾಧಿಕಾರಿ"ಯಾಗಿದ್ದ ಜಾರ್ ಚಕ್ರವರ್ತಿಯು ಸಿಂಹಾಸನವನ್ನು ತ್ಯಜಿಸುವುದರೊಂದಿಗೆ 1917ರ ಮಾರ್ಚ್ 15 ರಂದು ರಷ್ಯಾದ ಪ್ರಥಮ ಕ್ರಾಂತಿಯ ಯಶಸ್ಸನ್ನು ಇಡಿಯ ಜಗತ್ತಿಗೆ ಘೋಷಿಸಲಾಯಿತು. ಇಂಗ್ಲೆಂಡಿನ ರಾಜಕೀಯ ಮುತ್ಸದ್ದಿಗಳು ಸೇರಿದಂತೆ ಜಗತ್ತಿನ ಎಲ್ಲಾ ರಾಜನೀತಿ ತಜ್ಞರು ಜಗತ್ತಿನಲ್ಲಿ ಜನತಂತ್ರವನ್ನು ಜಾರಿಗೆ ತರುವಲ್ಲಿ ಇದೊಂದು ಮುಖ್ಯ ಹೆಜ್ಜೆ ಎಂದು ಅದನ್ನು ಪ್ರಶಂಸಿಸಿದರು. ಆದರೆ ನವೆಂಬರ್ ತಿಂಗಳ 7 ನೆಯ ತಾರೀಕು ಎರಡನೇ ರಷ್ಯನ್ ಕ್ರಾಂತಿಯು ಕೆರೆನ್ಸ್ಕಿ ನೇತೃತ್ವದ ಸರ್ಕಾರವನ್ನು ಕಿತ್ತೆಸೆದ ನಂತರ ರಷ್ಯಾದ ವಿದೇಶಾಂಗ ನೀತಿಯು ಬದಲಾಯಿತು. ಸೋವಿಯಟ್ ಸರ್ಕಾರದಲ್ಲಿನ ಬೋಲ್ಶೆವಿಕ್‌ರ ಮಾರ್ಗದರ್ಶನದಲ್ಲಿ ರಷ್ಯಾ ದೇಶವು ಜರ್ಮನಿಯ ನೇತೃತ್ವದ ಕೇಂದ್ರ ಶಕ್ತಿಗಳೊಂದಿಗೆ ಮೊದಲ ಮಹಾಯುದ್ಧದ ಸಂದರ್ಭದಲ್ಲಿ ಶಾಂತಿಯನ್ನು ಘೋಷಿಸಿತು. ರಷ್ಯಾ ದೇಶವು ಯುದ್ಧದಿಂದ ಹಿಂದೆ ಸರಿಯಿತು. ಮಾಯಮಂತ್ರಕ್ಕೊಳಗಾದಂತೆ, ಬ್ರಿಟಿಷ್ ಮುತ್ಸದ್ದಿಗಳು ತಾವು ಯಾವ ಜಾಗದಲ್ಲಿ ಕೆಲವೇ ತಿಂಗಳುಗಳ ಹಿಂದೆ ಜನತಂತ್ರದ ಸ್ವರ್ಗವನ್ನು ಕಂಡಿದ್ದರೋ ಅಲ್ಲಿ ಇದೀಗ ಭಯಾನಕವಾದ ಸರ್ವಾಧಿಕಾರದ ರಕ್ಕಸನನ್ನು ಕಾಣಲಾರಂಬಿಸಿದರು. ಅವರು ರಷ್ಯಾ ದೇಶವನ್ನು ಮತ್ತು ಬೋಲ್ಶೆವಿಕ್ಕರನ್ನು "ದ್ರೋಹಿಗಳು" ಎಂದು ಆಕ್ರೋಶದಿಂದ ಬಣ್ಣಿಸಲಾರಂಬಿಸಿದರು. ಆ ಸರ್ಕಾರದೊಡನೆ ಯಾವುದೇ ಸಂಬಂಧವನ್ನು ಇರಿಸಿಕೊಳ್ಳುವುದನ್ನು ತಿರಸ್ಕರಿಸಿದರು ಮತ್ತು ಬೋಲ್ಶೆವಿಕ್ಕರು ಪೈಶಾಚಿಕ ದೌರ್ಜನ್ಯಗಳನ್ನು ನಡೆಸುತ್ತಿದ್ದಾರೆ ಎಂಬ ಆಪಾದನೆಯನ್ನು ಹರಡಿದರು. ಯಾರನ್ನು ಕೆಳಗೆ ತುಳಿಯಬೇಕೆನಿಸುತ್ತದೆಯೋ ಅವರು ದೌರ್ಜನ್ಯಗಳನ್ನು ನಡೆಸುತ್ತಿದ್ದಾರೆ ಎಂದು ದೂರುವುದು, ತನ್ಮೂಲಕ ಜಗತ್ತಿನಲ್ಲಿ ಅವರ ಬಗ್ಗೆ ಪೂರ್ವಗ್ರಹಗಳನ್ನು ಹರಡುವುದು ಹಾಗೂ ಅವರ ಮಾತುಗಳನ್ನು ಯಾರು ಆಲಿಸದಂತೆ ಮಾಡುವುದು ಬಹುಕಾಲದಿಂದಲೂ ನಡೆದು ಬಂದಿರುವ ಒಂದು ರಾಜಕೀಯ ತಂತ್ರವೇ ಆಗಿದೆ. ಹಿಂದೊಮ್ಮೆ ಬ್ರಿಟಿಷ್ ಮುತ್ಸದ್ದಿಗಳು ಐರ್ಲೆಂಡಿನಲ್ಲಿ ನೆಪೋಲಿಯನ್‌ನ ಬಗ್ಗೆ ಹೀಗೆಯೇ ಮಾಡಿ ಐರ್ಲೆಂಡ್ ಅವನ ಬಗ್ಗೆ ಅನುಕಂಪ ತೋರದಂತೆ ಮತ್ತು ಇಂಗ್ಲೆಂಡ್‌ನ ವಿರುದ್ಧ ಆ ಚಕ್ರವರ್ತಿಯನ್ನು ಬೆಂಬಲಿಸದಿರುವಂತೆ ಮಾಡಿದ್ದರು. ಅದೇನೆ ಇರಲಿ ಅವರು ಹುಟ್ಟು ಹಾಕಿದ್ದ ಚಂಡಮಾರುತವು ತಣ್ಣಗಾಯಿತು. ರಾಜಕೀಯ ಅಗತ್ಯಕ್ಕಾಗಿ ರಷ್ಯಾದೊಂದಿಗೆ ವ್ಯಾಪಾರ ಸಂಬಂಧಗಳನ್ನು ನವೀಕರಿಸಲಾಯಿತು. ಇಂಗ್ಲೆಂಡಿನಲ್ಲಿ ಬೋಲ್ಶೆವಿಕ್ ಸರ್ಕಾರದ ಪ್ರತಿನಿಧಿಯಾಗಿದ್ದ ಕ್ರಾಸಿನ್ ಅವರು ರಷ್ಯಾ ಮತ್ತು ಇಂಗ್ಲೆಂಡ್‌ಗಳ ನಡುವೆ ಹೊಸ ಸಂಬಂಧಗಳನ್ನು ಏರ್ಪಡಿಸುವುದಕ್ಕಾಗಿ ಲಂಡನ್ ನಗರದಲ್ಲಿ ಬ್ರಿಟಿಷ್ ರಾಜತಾಂತ್ರಿಕರೊಡನೆ ಸಮ್ಮೇಳನದಲ್ಲಿ ಭಾಗವಹಿಸಿದರು. ತನ್ನನ್ನು ತಿರಸ್ಕಾರದಿಂದ ಕಾಣುತ್ತಿದ್ದ ಲಂಡನ್ ನಗರದ ಸಾಮ್ರಾಜ್ಯಶಾಹಿ ವಾತಾವರಣದಲ್ಲಿಯೇ ಒಂದು ಸ್ವಲ್ಪ ಕಾಲವಾದರೂ ಕೂಡ ಬೋಲ್ಶೆವಿಕ್ಕರ ಕೆಂಪು ಬಾವುಟವು ತಾತ್ಕಾಲಿಕವಾಗಿ ಬಾಡಿಗೆಗೆ ತೆಗೆದುಕೊಂಡಿದ್ದ ಕ್ರಾಸಿನ್ ಅವರ ಚಾಳದ ಮೇಲೆ ಹಾರಾಡುವಂತಾಯಿತು! ಲೇಬರ್ ಪಕ್ಷದ ನಿಯೋಗವೊಂದು ವಾಸ್ತವತೆಯನ್ನು ಅರಿಯಲು ರಷ್ಯಾಗೆ ತೆರಳಿತು. ಯುದ್ಧಕ್ಕೆ ಮುನ್ನ ಯಾವ ಅಧ್ಯಯನಕ್ಕೂ ಒಳಗಾಗದಿದ್ದ ಬೋಲ್ಶೆವಿಸಂ, ದಶ ದಿಕ್ಕುಗಳಿಂದಲೂ ಕೂಡ ಯುರೋಪಿನ ಬಂಡವಾಳಶಾಹಿ ಪ್ರಭುತ್ವಗಳಿಂದ ದೂಷಣೆಗೆ ಒಳಗಾಗಿದ್ದ ಬೋಲ್ಶೆವಿಸಂ, ಇದೀಗ ತಾನು ರಷ್ಯಾದ ನಾಯಕತ್ವವನ್ನು ವಹಿಸಿಕೊಂಡ ಮೇಲೆ ಒಂದಷ್ಟು ಚಿಂತನಾಶೀಲ ಪರಿಗಣನೆಗೆ ಮತ್ತು ಗಂಭೀರವಾದ ಅಧ್ಯಯನಕ್ಕೆ ಒಳಗಾಯಿತು. ನಾವು ಕೂಡ ಅದನ್ನೇ ಮಾಡೋಣ!

ಬೋಲ್ಶೆವಿಸಮ್ ಎಂಬುದು ಬೇರೆ ವಿಜ್ಞಾನಗಳಂತೆ ಕೇವಲ ರಾಜಕೀಯ ಮತ್ತು ಅರ್ಥಶಾಸ್ತ್ರದ ವಿಜ್ಞಾನವಲ್ಲ. ಅದು ಟೀಕೆಗಳಿಗೆ ಅನುಗುಣವಾಗಿ ತನ್ನನ್ನೇ ಬದಲಾಯಿಸಿಕೊಳ್ಳುವುದಿಲ್ಲ. ಒಬ್ಬ ನಿಜವಾದ ಮಾರ್ಕ್ಸ್‌ವಾದಿ ಅಥವಾ ಬೋಲ್ಶೆವಿಕ್‌ನು ತಾನು ನಿಷ್ಠನಾಗಿರುವ ಸಿದ್ಧಾಂತಗಳಲ್ಲಿ ಯಾವುದೇ ಬದಲಾವಣೆಯನ್ನು ಒಪ್ಪಿಕೊಳ್ಳುವುದಿಲ್ಲ. ಕ್ರಿಶ್ಚಿಯನ್ನರಿಗೆ ಬೈಬಲ್ ಇದ್ದಂತೆ, ಹಿಂದೂಗಳಿಗೆ ಭಗವದ್ಗೀತೆ ಇದ್ದಂತೆ, ಬೊಲ್ಶೆವಿಕರಿಗೆ ಕಾಲ್‌ಮಾರ್ಕ್ಸ್ ಬರೆದ ಗ್ರಂಥ 'ಕ್ಯಾಪಿಟಲ್ ಇದೆ. ದಿನದಿಂದ ದಿನಕ್ಕೆ ಕಾರ್ಲ್ ಮಾರ್ಕ್ಸ್ ಎಂಬ ಆ ಸ್ಪೂರ್ತಿದಾಯಕ ವ್ಯಕ್ತಿಯು ಒಬ್ಬ ಪೌರಾಣಿಕ ನಾಯಕನಂತೆ ಆಗುತ್ತಿದ್ದಾರೆ. ಬೋಲ್ಶೆವಿಸಮ್ ಎಂಬುದು ಒಂದು ಮತಧರ್ಮದ ಶಕ್ತಿಯನ್ನು ಮತ್ತು ಮತಧರ್ಮವು ಅಪೇಕ್ಷಿಸುವ ಹಿಂಜರಿಕೆಯಿಲ್ಲದ ನಂಬಿಕೆಯನ್ನು ಪಡೆದುಕೊಳ್ಳುತ್ತಿದೆ.

ಬೋಲ್ಶೆವಿಕ್ ಅಥವಾ ತೀವ್ರಗಾಮಿ ಮಾರ್ಕ್ಸ್‌ವಾದಿಯು, ಜಗತ್ತಿನಲ್ಲಿರುವ ಸಂಕಟವನ್ನು, ಬಡವರ್ಗಗಳನ್ನು ಶ್ರೀಮಂತರು ಮತ್ತು ಪ್ರಬಲರು ಶೋಷಿಸುವುದನ್ನು ಕಾಣುತ್ತಾನೆ ಮತ್ತು ಅದಕ್ಕೆ ಕಾರಣವನ್ನು ಹುಡುಕುತ್ತಾ ಮೂರು ನಿರ್ಣಯಗಳಿಗೆ ಬರುತ್ತಾನೆ, ಅವು ಈ ಮೂರು ಪರಿಕಲ್ಪನೆಗಳಲ್ಲಿವೆ: ಆರ್ಥಿಕ ಭೌತವಾದ, ಮಿಗುತಾಯ ಮೌಲ್ಯ ಮತ್ತು ವರ್ಗ ಸಮರ.

ತೀವ್ರಗಾಮಿ ಕಮ್ಯುನಿಸ್ಟ್ ತತ್ವದ ಅಡಿಯಲ್ಲಿ ಆರ್ಥಿಕ ಭೌತವಾದದ ಸಿದ್ಧಾಂತವು ಹೇಳುವುದೇನೆಂದರೆ, ಎಲ್ಲ ಮಾನವ ಚಟುವಟಿಕೆಗಳ ಹಿಂದಿರುವ ಪ್ರೇರಣೆಯೆಂದರೆ ಆರ್ಥಿಕವಾಗಿ ಉನ್ನತಿಯನ್ನು ಸಾಧಿಸಬೇಕು ಎಂಬುದು ಮತ್ತು "ಚರಿತ್ರೆಯ ಎಲ್ಲಾ ದೊಡ್ಡ ವಿದ್ಯಮಾನಗಳು ಸಹ ನಿರ್ಣಯಿಸಲ್ಪಡುವುದು ಆರ್ಥಿಕ ಉದ್ದೇಶಗಳಿಂದ" ಎಂದು. ನಾವು ಚರಿತ್ರೆಯಲ್ಲಿನ ಬೃಹತ್ ಚಳುವಳಿಗಳನ್ನು ಪರಿಶೀಲಿಸಿದರೆ ಅವು ಈ ದೃಷ್ಟಿಕೋನವನ್ನು ಸಮರ್ಥಿಸುವುದು ಅರಿವಾಗುತ್ತದೆ. ಯುರೋಪಿನಲ್ಲಿ ಘಟಿಸಿದ ಮಹತ್ವದ ಧಾರ್ಮಿಕ ಚಳುವಳಿಯಾದ ಧಾರ್ಮಿಕ ಸುಧಾರಣಾ ಆಂದೋಲನವನ್ನೇ ತೆಗೆದುಕೊಳ್ಳಿ. ಅದರ ಯಶಸ್ಸಿಗೆ ಕಾರಣವೆಂದರೆ ಜನತೆಗೆ ಮತ್ತು ರಾಜ್ಯಗಳಿಗೆ ಆರ್ಥಿಕ ಸ್ವಾತಂತ್ರ್ಯ ಸಿಕ್ಕಬಹುದು ಎಂಬ ನಿರೀಕ್ಷೆ ಮತ್ತು ಪೋಪ್‌ಗೆ ಹಾಗೂ ಪುರೋಹಿತರಿಗೆ ಅವರು ಯಾವುದೇ ಕಂದಾಯವನ್ನು ಅಥವಾ ಋಣಸಂದಾಯವನ್ನು ಮಾಡಬೇಕಾಗಿಲ್ಲ ಎಂಬ ಆಶ್ವಾಸನೆ. ಈ ರೀತಿಯಲ್ಲಿ ಜನಸಮುದಾಯಕ್ಕೆ ಇನ್ನು ಮುಂದೆ ಪೋಪ್ ಹಾಗೂ ಪುರೋಹಿತರು ತಮ್ಮನ್ನು ಉಸಿರುಗಟ್ಟಿಸುವಂತೆ ಹೇರಿದ್ದ ತೆರಿಗೆಗಳಿಂದ ಬಿಡುಗಡೆ ಸಿಗಬಹುದು ಎಂಬ ನಿರೀಕ್ಷೆ ಇಲ್ಲದಿದ್ದರೆ, ಮುದ್ರಣ ಯಂತ್ರದಂತಹ ಆವಿಷ್ಕಾರಗಳು, ಎಲ್ಲವನ್ನು ಕಸಿದುಕೊಂಡು ಕಾನ್‌ಸ್ಟಾಂಟಿನೋಪಲ್‌ನಿಂದ ಹೊರಗೆ ತಳ್ಳಲ್ಪಟ್ಟ ಪಂಡಿತರ ತತ್ವಶಾಸ್ತ್ರ ಇವುಗಳಿಗೆ ಜನತೆಯು ಹೊಸ ನಂಬಿಕೆಯೊಂದನ್ನು ಅಂಗೀಕರಿಸುವಂತೆ ಹಾಗೂ ಪೋಪನ ಅಧಿಕಾರಕ್ಕೆ ಅವಿಧೇಯರಾಗುವಂತೆ ಬಡಿದೆಬ್ಬಿಸುವಂತಹ ಶಕ್ತಿ ಸಾಕಷ್ಟು ಮಟ್ಟಿಗೆ ಇರುತ್ತಿತ್ತೇ ಎಂಬುದು ಪ್ರಶ್ನಾರ್ಹ.

ಇಡಿಯ ಫ್ರೆಂಚ್ ಕ್ರಾಂತಿ ಮತ್ತು ಅದರಿಂದ ಇತರ ರಾಷ್ಟ್ರಗಳಲ್ಲಿ ಹುಟ್ಟಿಕೊಂಡ ಅಂಥದೇ ಕ್ರಾಂತಿಗಳು ಸಾಧ್ಯವಾದದ್ದು ಜನತೆ ನಿಜಕ್ಕೂ ಸಂಪೂರ್ಣವಾಗಿ ದರಿದ್ರರಾದಾಗ ಮತ್ತು ತೆರಿಗೆ ಸಂಗ್ರಹದ ಮೂಲಕ ಆದಾಯವನ್ನು ಕ್ರೋಢೀಕರಿಸುವಲ್ಲಿ ದೇಶದ ಸರ್ಕಾರಗಳು ವಿಫಲರಾದಾಗ. ಸ್ಪೇನ್ ದೇಶದ ಹಡಗುಗಳು ಪೆರುವಿನ ಗಣಿಗಳಿಂದ ಚಿನ್ನ ಮತ್ತು ಬೆಳ್ಳಿಯನ್ನು ಪೇರಿಸಿಕೊಂಡು ಬಂದದ್ದನ್ನು ಕಾಣದಿದ್ದರೆ ಯುರೋಪಿನ ರಾಷ್ಟ್ರಗಳು ಹೊಸ ಜಗತ್ತಿನತ್ತ ವಿಸ್ತರಣೆಯಾಗುತ್ತಿರಲಿಲ್ಲ. ತಮ್ಮ ಸಂಪತ್ತು ಇಂಗ್ಲೆಂಡಿನ ಖಜಾನೆಯಲ್ಲಿ ಶೇಖರಣೆಯಾಗುತ್ತಿದೆ ಎಂಬುದನ್ನು ಕಂಡಾಗ ಅಮೆರಿಕನ್ನರು ಸ್ವಾತಂತ್ರ್ಯಕ್ಕಾಗಿ ಹೋರಾಡಲು ಮತ್ತು ಅಮೆರಿಕದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಇದು ನಾಂದಿಯಾಯಿತು. ಹೀಗೆ ಯುರೋಪಿನ ಚರಿತ್ರೆಯ ಮುಖ್ಯವಾದ ಘಟನೆಗಳು ಆರ್ಥಿಕ ಉದ್ದೇಶಗಳಿಂದ ಮುನ್ನಡೆಸಲ್ಪಟ್ಟಿದ್ದವು.

ದೈನಂದಿನ ಬದುಕಿನಲ್ಲೂ ಸಹ ಮನುಷ್ಯನ ಹೋರಾಟಕ್ಕೆ ಇರುವ ಮೂಲಭೂತ ಕಾರಣವೆಂದರೆ ಧನಸಂಪಾದನೆಯ ಆಕಾಂಕ್ಷೆ. ಬದುಕಲಿಕ್ಕಾಗಿ ಹಣ ನಂತರ ವಿಲಾಸ ಜೀವನಕ್ಕಾಗಿ ಹಣ ಮತ್ತು ಅದರ ನಂತರವೇ ಪ್ರೇಮ, ಸ್ನೇಹ, ಧರ್ಮ, ನೈತಿಕತೆಗಳು ಅವುಗಳನ್ನನುಸರಿಸಿ ಬರುತ್ತವೆ.

ಇಷ್ಟಾಗಿ ಇದೆಲ್ಲಾ ಆದಮೇಲೆ ಈ ಪ್ರಬಲ ಅಂಶದಿಂದ ಹುಟ್ಟಿಕೊಳ್ಳುವ ಫಲಿತಾಂಶವೇನು? ಆರ್ಥಿಕ ಭೌತವಾದದ ಸಿದ್ಧಾಂತವು ಹೇಳುವುದೇನೆಂದರೆ, ಇದರಿಂದಾಗಿ ಸಂಪತ್ತಿನಲ್ಲಿ ಅಸಮಾನತೆ ಉಂಟಾಗುತ್ತದೆ ಮತ್ತು ಅದರಿಂದಾಗಿ ಜನತೆಯ ಎಲ್ಲ ಸಂಕಟಗಳು ಉದ್ಭವಿಸುತ್ತವೆ, ಇದು ಹೆಚ್ಚು ಹೆಚ್ಚು ಅಸಹನೀಯ ಪರಿಸ್ಥಿತಿಗೆ ಕಾರಣವಾಗಿ ಕೆಲವರಲ್ಲಿ ಕೋಟಿಗಟ್ಟಲೆ ಹಣ ಸಂಗ್ರಹಿಸಲ್ಪಟ್ಟರೆ ಇನ್ನು ಕೆಲವರು ಊಟಕ್ಕಾಗಿ ಭಿಕ್ಷೆ ಬೇಡುತ್ತಿರುತ್ತಾರೆ ಅಥವಾ ಉಪವಾಸ ಬಿದ್ದಿರುತ್ತಾರೆ. ಈ ಅಸಮಾನತೆಯ ಒಂದು ಧ್ರುವದಲ್ಲಿ ಬಂಡವಾಳವಾದವಿದ್ದರೆ ಇನ್ನೊಂದು ಧ್ರುವದಲ್ಲಿ ಜನತೆಯ ದಾರಿದ್ರ್ಯವಿರುತ್ತದೆ.

ಸಹಜವಾಗಿಯೇ ಇದರ ನಂತರ ಹುಟ್ಟಿಕೊಳ್ಳುವ ಪ್ರಶ್ನೆ ಎಂದರೆ ಶ್ರೀಮಂತರು ಅಥವಾ ಬಂಡವಾಳಗಾರರು ಇಷ್ಟೊಂದು ಸಂಪತ್ತನ್ನು ಸಂಗ್ರಹಿಸಿದ್ದು ಹೇಗೆ, ಆಧುನಿಕ ಸಮಾಜದಲ್ಲಿ ಇದು ಮುಂದುವರೆಯುತ್ತಿರುವುದು ಮತ್ತು ಅವರ ಸಂಖ್ಯೆ ಹೆಚ್ಚುತ್ತಿರುವುದು ಹೇಗೆ ಎಂಬುದು. ಇಡೀ ಸಮಾಜದ ಒಟ್ಟು ಶ್ರಮದಿಂದ ಸಂಪತ್ತು ಉತ್ಪನ್ನವಾಗಿರುವಾಗ ಕೆಲವೇ ಕೆಲವರಲ್ಲಿ ಇಂತಹ ಮಿತಿ ಇಲ್ಲದ ಸಂಪತ್ತು ಸಂಗ್ರಹವಾಗಲು ಅವಕಾಶ ನೀಡುವ ಅಂಶ ಯಾವುದು? ಇದಕ್ಕೆ ಉತ್ತರಿಸುವ ಹಂತದಲ್ಲಿ ಮಿಗುತಾಯ ಮೌಲ್ಯದ ಸಿದ್ಧಾಂತ ಎಂಬುದು ಮಾರ್ಕ್ಸ್‌ವಾದಿ ಸಿದ್ಧಾಂತದಲ್ಲಿ ಕಾಣಿಸಿಕೊಳ್ಳುತ್ತದೆ.

ಬಿಹಾರ, ಒರಿಸ್ಸಾ ಮತ್ತು ಬಂಗಾಳದ ಜಮೀನ್ದಾರರಂತೆ ಬೃಹತ್ ಜಮೀನುಗಳಲ್ಲಿ ಬಂಡವಾಳಗಾರನು ಬಂಡವಾಳವನ್ನು ಹೊಂದಿರುತ್ತಾನೆ. ಅವನು ಅಷ್ಟೊಂದು ಜಮೀನನ್ನು ಹೊಂದಲು ಸಾಧ್ಯವಾದದ್ದು ಹೇಗೆ? ಅವನು ಇದಕ್ಕಾಗಿ ಶ್ರಮ ಪಟ್ಟಿದ್ದಾನೆಯೇ, ಬೆವರು ಸುರಿಸಿದ್ದಾನೆಯೇ? ಅವನು ಇದನ್ನು ತನ್ನ ವಂಶದ ಹಿರಿಯರಿಂದ ಪಡೆದುಕೊಂಡ ಎನ್ನುವ ಹಾಗಿದ್ದರೆ ಅವನ ಹಿರಿಯರಾದರೂ ಅದಕ್ಕಾಗಿ ದುಡಿದಿದ್ದರೇ? ಜಮೀನು ಎಂಬುದು ಮನುಷ್ಯನ ಶ್ರಮದ ಉತ್ಪನ್ನವಲ್ಲ ಮತ್ತು ಹಾಗಾಗಿ ಯಾವುದೇ ಮನುಷ್ಯನಾಗಲೀ ನಾನು ಅದಕ್ಕಾಗಿ ದುಡಿದಿದ್ದೇನೆ ಎಂದು ಹೇಳಿಕೊಂಡು ಆಸ್ತಿಯಾಗಿ ಭೂಮಿಯನ್ನು ಹೊಂದುವುದು ಸಾಧ್ಯವಿಲ್ಲ. ಚರಿತ್ರೆಯು ತೋರಿಸುವುದೇನೆಂದರೆ, "ಬಹುತೇಕ ದೇಶಗಳಲ್ಲಿ; ಪ್ರಾಯಶಹ ಎಲ್ಲೆಲ್ಲಿ ಆ ಪ್ರಕ್ರಿಯೆಯು ಪೂರ್ಣಗೊಂಡಿದೆಯೋ ಅಲ್ಲೆಲ್ಲ; ಭೂಮಿಯನ್ನು ವ್ಯಕ್ತಿಗಳು ವಶಕ್ಕೆ ತೆಗೆದುಕೊಂಡಿರುವುದು ತಾವೇ ಅದರ ಮೇಲೆ ಶ್ರಮವನ್ನು ಹಾಕಿ ಅದನ್ನು ತಮ್ಮದಾಗಿಸಿಕೊಂಡಿರುವುದರಿಂದ ಅಲ್ಲ; ಬದಲಿಗೆ ಬೇರೆಯವರು ಯಾವ ಭೂಮಿಯ ಮೇಲೆ ಶ್ರಮವನ್ನು ಹಾಕಿದ್ದಾರೋ ಅದನ್ನು ಬಲಪ್ರಯೋಗದಿಂದ ವಶಪಡಿಸಿಕೊಂಡಿರುವುದರ ಮೂಲಕ. ಭೂಮಿಯ ಒಡೆಯರು ಯಾರೆಂದರೆ ಅವರು ಯುದ್ಧವನ್ನು ಗೆದ್ದವರೇ ಆಗಿರುತ್ತಾರೆ" (ಟಿ ಎಚ್ ಗ್ರೀನ್: ಪ್ರಿನ್ಸಿಪಲ್ಸ್ ಆಫ್ ಪೊಲಿಟಿಕಲ್ ಆಬ್ಲಿಗೇಷನ್). ಬಲಪ್ರಯೋಗದಿಂದ ಮೂಲ ಒಡೆಯರು ಅದನ್ನು ಗಳಿಸಿಕೊಂಡಿರುವಾಗ ಅವರ ಉತ್ತರಾಧಿಕಾರಿಗಳು ಬೇರೆಯವರನ್ನು ದೂರವಿಟ್ಟು ತಾವೇಕೆ ಅದನ್ನು ಅನುಭವಿಸಬಾರದು ಎಂದುಕೊಳ್ಳುತ್ತಾರೆ. ಅವರು ಇಡೀ ಸಮುದಾಯದ ಹಿತಾಸಕ್ತಿಗಾಗಿ ಭೂಮಿಯನ್ನು ಹೊಂದಿದ್ದೇವೆ ಎಂದು ವಾದಿಸಬಹುದು. ಆದರೆ ಅನುಭವವು ಸಾರಿ ಹೇಳುವುದೇನೆಂದರೆ, ಎಲ್ಲರೂ ಅಲ್ಲದಿದ್ದರೂ ಬಹುತೇಕ ಭೂಮಿಯ ಒಡೆಯರು ಎಂದಿಗೂ ಸಹ ಸಮುದಾಯದ ಒಳಿತಿನ ಕಲ್ಪನೆಯನ್ನು ಹೊಂದಿರಲಿಲ್ಲ, ಬದಲಿಗೆ ಇಂಗ್ಲೆಂಡಿನಲ್ಲಿ ಮಾಡಿದಂತೆ ಮನಸೋಯಿಚ್ಛೆಯಾಗಿ ಭೂಮಿಯನ್ನು ಬೇಟೆಯ ಕಾಡುಗಳನ್ನಾಗಿಯೂ, ಉದ್ಯಾನಗಳನ್ನಾಗಿಯೂ ಪರಿವರ್ತಿಸುತ್ತಾ ಸಮುದಾಯದ ಹಿತಾಸಕ್ತಿಗೆ ವಿರುದ್ಧವಾಗಿ ಕೆಲಸ ಮಾಡಿದ್ದಾರೆ. ಅಥವಾ ಸುಮ್ಮನೆ ಸೋಮಾರಿಗಳಾಗಿ ಒಡೆತನ ಹೊಂದಿರುವ ತಮಗಿಂತ ಸಮಾಜದ ಸಾಮಾನ್ಯ

ಹಿತಾಸಕ್ತಿಯಲ್ಲಿ ಕೆಲಸ ಮಾಡುತ್ತಿರುವ ತಾತ್ಕಾಲಿಕ ರೈತ ಗೇಣಿದಾರನಿಗೆ ಕಿರುಕುಳ ಕೊಟ್ಟಿರುತ್ತಾರೆ. ವಾದಕ್ಕಾಗಿ ಅವರು ಸಮಾಜದ ಸಾಮಾನ್ಯ ಒಳಿತಿಗಾಗಿ ಕೆಲಸ ಮಾಡುತ್ತಿದ್ದಾರೆ ಎಂದು ಒಪ್ಪಿಕೊಂಡರೂ ಸಹ ಸಮಾಜವು ಈ "ಸಮಾನ ಒಳಿತಿನ ಸೇವಕ"ನನ್ನು ಅವನ ಹೊರೆಯಿಂದ ಮುಕ್ತಗೊಳಿಸಿ ಭೂಮಿಯನ್ನು ನೇರವಾಗಿ ನಿರ್ವಹಣೆಗೆ ತೆಗೆದುಕೊಳ್ಳುವುದು ಅಥವಾ ರಾಷ್ಟ್ರೀಕರಣಗೊಳಿಸುವುದು ಸಮರ್ಥನೀಯವೇ ಆಗಿರುತ್ತದೆ.

ಭೂಮಿರೂಪದ ಆಸ್ತಿಯನ್ನು ಬಂಡವಾಳಶಾಹಿ ಮಾಲೀಕರು ಬೇರೆ ಒಡೆಯರಿಂದ ಖರೀದಿಸಿರಬಹುದು ಎಂದು ಸಹ ವಾದಿಸಬಹುದು. ಆದರೆ ಭೂಮಿ ರೂಪದ ಆಸ್ತಿಯು ಅದು ತನ್ನ ಸಹಜ ಗುಣದಿಂದಾಗಿಯೇ ಮನುಷ್ಯನ ಶ್ರಮದಿಂದ ಆಗಿರುವುದು ಸಾಧ್ಯವಿಲ್ಲ, ಬದಲಿಗೆ ಅದನ್ನು ಬಲಪ್ರಯೋಗದಿಂದ ವಶಪಡಿಸಿಕೊಂಡಿರಬೇಕು ಎಂಬುದನ್ನು ನಾವು ಈಗಾಗಲೇ ಗಮನಿಸಿದ್ದೇವೆ ಮತ್ತು ಈ ಕಾರಣದಿಂದಲೇ ಅದನ್ನು ಯಾರೂ ಸಹ ಆಸ್ತಿಯಾಗಿ ಹೊಂದಿರಬಾರದು, ಯಾವುದೇ ವ್ಯಕ್ತಿಯು ಅದನ್ನು ಇನ್ನೊಬ್ಬ ವ್ಯಕ್ತಿಯಿಂದ ಕೊಳ್ಳುವುದಾಗಲಿ ಅಥವಾ ಇನ್ನೊಬ್ಬರಿಗೆ ಮಾರುವುದಾಗಲೀ ಮಾಡಬಾರದು, ಏಕೆಂದರೆ ಅದು ಇಡೀ ಸಮಾಜಕ್ಕೆ ಸೇರಿದ ಆಸ್ತಿಯಾಗಿದ್ದು ಅದನ್ನು ಇಡೀ ಸಮಾಜದ ಒಪ್ಪಿಗೆ ಇಲ್ಲದೆ ಯಾವುದೇ ರೂಪದಲ್ಲಾಗಲಿ ಹಸ್ತಾಂತರ ಮಾಡಲಾಗದು.

ನಂತರ ಬರುವ ಪ್ರಶ್ನೆ ಎಂದರೆ ಬಹಳ ಸುಲಭವಾಗಿ ನಗದು ರೂಪಕ್ಕೆ ಪರಿವರ್ತಿಸಲು ಸಾಧ್ಯವಿರುವ ಚರಾಸ್ತಿಯಲ್ಲಿರುವ ಬಂಡವಾಳವಾದ ಮತ್ತು ಕಾರ್ಖಾನೆಯ ಲಾಭದ ರೂಪದಲ್ಲಿ ಗಳಿಸಿಕೊಳ್ಳಲಾಗಿರುವ ಸಂಪತ್ತಿನ ಸ್ವರೂಪದ ಬಂಡವಾಳವಾದ. ಎಲ್ಲ ಕಾರ್ಖಾನೆಗಳ ಕಾರ್ಯ ಶೈಲಿಯನ್ನು ಪರಿಶೀಲಿಸಿದಾಗ ನಾವು ಕಾಣುವುದೇನೆಂದರೆ, ಎಲ್ಲ ಕಾರ್ಖಾನೆಗಳ ಬೆನ್ನುಮೂಳೆಯಂತಿರುವ ದೈಹಿಕ ಶ್ರಮವು ಅತ್ಯಂತ ಕಡಿಮೆ ವೇತನವನ್ನು ಪಡೆಯುತ್ತಿರುತ್ತದೆ. ಆದರೆ ಅದೇ ಸಮಯದಲ್ಲಿ ಮಾರುಕಟ್ಟೆಯ ಊಹಾಪೋಹದಲ್ಲಿ ತೊಡಗುವಂತಹ ಅಥವಾ ಮಧ್ಯವರ್ತಿಯಾಗಿ ವ್ಯಾಪಾರ ಮಾಡುವಂತಹ ಬೌದ್ಧಿಕ ಶ್ರಮವು ದೈಹಿಕ ಶ್ರಮದ ಚಟುವಟಿಕೆಯಿಂದ ಬರುವ ಲಾಭಗಳನೆಲ್ಲ ತಾನು ಕಬಳಿಸಿಕೊಂಡಿರುತ್ತದೆ. ಆಧುನಿಕ ಕೈಗಾರಿಕಾ ಪದ್ಧತಿಗಳನ್ನು ನಿಯಂತ್ರಿಸುವ ನಿಯಮಗಳಿಂದಲೇ ಬಂಡವಾಳಗಾರರು ಅಸ್ತಿತ್ವಕ್ಕೆ ಬಂದಿರುತ್ತಾರೆ. ಈ ನಿಯಮಗಳ ಮೂಲಕ ಅವಕಾಶಗಳನ್ನು ಬಾಚಿಕೊಳ್ಳುವ ಕೆಲವೇ ಜನ ಮಾಲೀಕರು, ಅನೇಕರು ಮಾಡುವ ಭೌತಿಕ ಶ್ರಮದ ಉತ್ಪಾದನೆಯಲ್ಲಿ ಸೃಷ್ಟಿಯಾಗುವ ಮಿಗುತಾಯ ಮೌಲ್ಯವನ್ನು ವಶಪಡಿಸಿಕೊಂಡು ತಾವು ಗಳಿಸದಿರುವ ಆದಾಯದ ಒಡೆಯರಾಗಿರುತ್ತಾರೆ. ಏಕೆಂದರೆ ಸಮಾಜದಲ್ಲಿ ಯಾವಾಗಲೂ ಸಹ ದೈಹಿಕ ಶ್ರಮ ಮಾಡುವವರು ದೊಡ್ಡ ಸಂಖ್ಯೆಯಲ್ಲಿ ಇರುತ್ತಾರೆ. ಬಂಡವಾಳಶಾಹಿ ಇಂಗ್ಲೆಂಡ್ ನ ಉದಾಹರಣೆಯನ್ನೇ ತೆಗೆದುಕೊಳ್ಳಿ. "ಇಂಗ್ಲೆಂಡಿನಲ್ಲಿ ನೂರಕ್ಕೆ ೯೦ ರಷ್ಟು ಜನ ವಯಸ್ಕರು ದೈಹಿಕ ಕೆಲಸ ಮಾಡುವ ಕಾರ್ಮಿಕರು. ಅವರಲ್ಲಿ ಬಹುತೇಕ ಜನರು ಎಂತಹ ಬಡಾವಣೆಗಳಲ್ಲಿ ಮತ್ತು ಮನೆಗಳಲ್ಲಿ ವಾಸ ಮಾಡುತ್ತಾರೆಂದರೆ ಅವರಿಗೆ ಮುಕ್ತವಾದ ಹಾಗೂ ಆರೋಗ್ಯಕರ ಬೆಳವಣಿಗೆ ಸಾಧ್ಯವೇ ಇಲ್ಲ. ಪ್ರತಿ 100 ರಲ್ಲಿ 23 ಜನ ಬಡತನದ ರೇಖೆಗಿಂತ ಕೆಳಗೆ ಬದುಕುತ್ತಿರುತ್ತಾರೆ. ಎಂದರೆ ಅವರಿಗೆ ಸರಿಯಾದ ಉಡುಪು ಇರುವುದಿಲ್ಲ, ಮನೆ ಚೆನ್ನಾಗಿರುವುದಿಲ್ಲ ಮತ್ತು ಅವರಿಗೆ ಆಹಾರ ಎಷ್ಟು ಕಡಿಮೆ ದೊರೆಯುತ್ತದೆಂದರೆ ಅವರು 50 ವರ್ಷ ವಯಸ್ಸನ್ನು ಮುಟ್ಟುವುದಕ್ಕೆ ಮುಂಚೆ ಸಾಯುತ್ತಾರೆ ಅಥವಾ ಅವರ ವಯಸ್ಸಿಗೆ ಅಸಹಜವಾದ ವಿಪರೀತ ದೈಹಿಕ ವೇದನೆಗಳನ್ನು ಅನುಭವಿಸುತ್ತಾರೆ. ಇಷ್ಟಾಗಿ ಇವರೆಲ್ಲರೂ ಸಹ ತಾವು ಅನುಭವಿಸಲಾಗದ ಆಹಾರವನ್ನು, ಬಟ್ಟೆಯನ್ನು, ವಿಲಾಸಿ ಜೀವನದ ವಸ್ತುಗಳನ್ನು ಉತ್ಪಾದಿಸುತ್ತಿದ್ದಾರೆ ಮತ್ತು ವಿತರಿಸುತ್ತಿದ್ದಾರೆ". ಇವರ ಶ್ರಮದಿಂದ ಉತ್ಪಾದನೆಯಾಗುವ ಮಿಗುತಾಯ ಮೌಲ್ಯ ಅಥವಾ ಲಾಭವು ಬಂಡವಾಳಶಾಹಿಗಳ ಖಾಸಗಿ ಆಸ್ತಿಯಾಯಗುತ್ತದೆ ಮತ್ತು ದೈಹಿಕ ದುಡಿಮೆ ಮಾಡುವ

ಇವರಿಗೆ ಅದರಲ್ಲಿ ಯಾವ ಹಕ್ಕು ಇರುವುದಿಲ್ಲ. ಮಾರ್ಕ್ಸ್ ಅವರ ಮಿಗುತಾಯ ಮೌಲ್ಯ ಸಿದ್ಧಾಂತದ ಮುಖ್ಯ ಪ್ರತಿಪಾದನೆ ಇದೇ ಆಗಿದೆ.

ಈ ತೀರ್ಮಾನಕ್ಕೆ ಬಂದ ಮಾರ್ಕ್ಸ್‌ವಾದಿಯು ಬಂಡವಾಳವಾದಕ್ಕೆ ಶ್ರಮಜೀವಿಗಳು ಗುಲಾಮರಾಗುವಂತಹ ಈ ಪರಿಸ್ಥಿತಿಯನ್ನು ಯಾವ ವಿಧಾನದ ಮೂಲಕ ಕೊನೆಗಾಣಿಸಬೇಕು ಎಂಬುದನ್ನು ಕಂಡುಹಿಡಿಯಲು ಪ್ರಯತ್ನಿಸುತ್ತಾನೆ ಮತ್ತು ಅದನ್ನು ಪ್ರತಿಪಾದಿಸುತ್ತಾನೆ. ಬಂಡವಾಳಗಾರರು ಉತ್ಪಾದನಾ ಸಾಧನಗಳನ್ನು ನಿಯಂತ್ರಿಸುವುದರಿಂದ ತಾವು ಗಳಿಸದಿರುವ ಅಪಾರವಾದ ಸಂಪತ್ತಿಗೆ ಮಾಲೀಕರಾಗುತ್ತಾರೆ ಮತ್ತು ತನ್ಮೂಲಕ ಶ್ರಮಜೀವಿಗಳ ಅಥವಾ ಕೂಲಿಗಾರರ ಒಡೆಯರಾಗುತ್ತಾರೆ. ಬಹುತೇಕವಾಗಿ ದೈಹಿಕ ಶ್ರಮದಲ್ಲಿ ತೊಡಗುವ ಕಾರ್ಮಿಕರಿಂದಲೇ ರಚಿತವಾಗಿರುವ ಈ ಸಮಾಜವು ಅಥವಾ ಪ್ರಭುತ್ವವು ಈ ಉತ್ಪಾದನಾ ಸಾಧನಗಳ ಮೇಲೆ ನೇರ ನಿಯಂತ್ರಣವನ್ನು ಹೊಂದುವಂತಾದರೆ, ಪ್ರತಿಯೊಬ್ಬರ ಅವಶ್ಯಕತೆಯನ್ನು ಪೂರೈಸುವಂತೆ ಉತ್ಪಾದನೆ ಮತ್ತು ವಿತರಣೆಯನ್ನು ವ್ಯವಸ್ಥೆ ಮಾಡಲಾದರೆ ಮತ್ತು ಉತ್ಪಾದನೆಯಲ್ಲಿನ ಮಿಗುತಾಯ ಮೌಲ್ಯವನ್ನು ಸಮಾಜದ ಸಾಮಾನ್ಯ ಒಳಿತಿಗಾಗಿ ಉಪಯೋಗಿಸಲಿಕ್ಕಾದರೆ, ಯಾರೇ ಆಗಲಿ ಸಂಪತ್ತನ್ನು ಸಂಗ್ರಹಿಸುವುದು ಅಸಾಧ್ಯವಾದರೆ ಮತ್ತು ಎಷ್ಟೊಂದು ಕೆಡಕುಗಳಿಗೆ ಮೂಲವಾದ ಭೂಮಿ ಮತ್ತು ಹಣಕಾಸಿಗೆ ಸಂಬಂಧಿಸಿದ ಖಾಸಗಿ ಆಸ್ತಿ ಎಂಬುದು ಇಲ್ಲವಾದರೆ ಹೇಗಿರುತ್ತದೆ? ಇದನ್ನು ಸಾಧಿಸಬೇಕೆಂದರೆ ಕಾರ್ಮಿಕರು ಮತ್ತು ರೈತರು ಪ್ರಭುತ್ವದ ಯಂತ್ರವನ್ನು ತಮ್ಮ ಕೈಗೆ ತೆಗೆದುಕೊಳ್ಳುವಂತಾಗಬೇಕು ಮತ್ತು ಅವರು ತಮ್ಮ ಸ್ವಂತ ಹಿತಾಸಕ್ತಿಗಾಗಿ ಪ್ರಭುತ್ವವನ್ನು ನಿಯಂತ್ರಿಸುವ ಬಂಡವಾಳಗಾರರನ್ನು ಸರ್ಕಾರದ ಆಡಳಿತದಿಂದ ದೂರವಿಡಬೇಕು. ಇದನ್ನು ಕೇವಲ ವರ್ಗ ಸಮರದ ಮೂಲಕ, ರೈತರು ಮತ್ತು ಕಾರ್ಮಿಕರ 'ಸಶಸ್ತ್ರ ಕ್ರಾಂತಿ'ಯ ಮೂಲಕ ಸಾಧಿಸಲು ಸಾಧ್ಯ.

ಒಬ್ಬ ತೀವ್ರಗಾಮಿಯಾದ ಮಾರ್ಕ್ಸ್‌ವಾದಿಯು ವರ್ಗ ಸಮರದ ಈ ವಿಧಾನದಲ್ಲಿ ಮತ್ತು ಶ್ರಮಜೀವಿಗಳ ಸಶಸ್ತ್ರ ಕ್ರಾಂತಿಯಲ್ಲಿ ದೃಢವಾಗಿ ಮತ್ತು ಶ್ರದ್ಧಾಪೂರ್ವಕವಾಗಿ ನಂಬಿಕೆಯಿಟ್ಟುಕೊಂಡಿರುತ್ತಾನೆ. ಅವನ ಪ್ರಕಾರ ಉತ್ಪಾದನಾ ಸಾಧನಗಳ ಮೇಲೆ ಹಾಗೂ ಪ್ರಭುತ್ವದ ಮೇಲೆ ಶಾಂತಿಯುತವಾದ ಕ್ರಾಂತಿಯ ಮೂಲಕ ನಿಯಂತ್ರಣವನ್ನು ಸಾಧಿಸುವುದು ಸಾಧ್ಯವೇ ಇಲ್ಲ. ನಿಯಂತ್ರಣವನ್ನು ಸಾಧಿಸುವುದಕ್ಕೆ ಒಗ್ಗಿಕೊಂಡ ಮನುಷ್ಯನೊಬ್ಬನಿಗೆ ಅವನು ನಿಯಂತ್ರಿಸಬಾರದೆಂದು ಹೇಳುವುದು ಅಥವಾ ಯಾವುದೇ ರೀತಿಯ ಬಲಾತ್ಕಾರವಿಲ್ಲದೆ ಸುಮ್ಮನೆ ಹೇಳಿದರೆ ಸಾಕು ಅವನು ಅದನ್ನು ಪಾಲಿಸುತ್ತಾನೆ ಎಂದು ನಿರೀಕ್ಷಿಸುವುದು ಅಸಂಬದ್ಧವಾದುದು. ಇಂಗ್ಲೆಂಡಿನಲ್ಲಿರುವ ಸಂಸತ್ತಾತ್ಮಕ ಪ್ರಜಾಪ್ರಭುತ್ವದಂತಹ ಪ್ರಾತಿನಿಧಿಕ ಸರ್ಕಾರಗಳ ಮೂಲಕ ಇದನ್ನು ಕ್ರಮೇಣ ಸಾಧಿಸುವ ವಿಧಾನವು ಸಹ ಸಾಧ್ಯವಿಲ್ಲದ್ದು. ಏಕೆಂದರೆ ಇಂದಿನ ಸರ್ಕಾರಗಳು ಬಂಡವಾಳಗಾರರ ಅಥವಾ ಬೂರ್ಶ್ವಾ ವರ್ಗದ ಪ್ರಾಬಲ್ಯಕ್ಕೆ ಒಳಗಾಗಿದ್ದು ಅವರು ಸೈನ್ಯವನ್ನು, ಮಾಧ್ಯಮವನ್ನು, ಶಿಕ್ಷಣವನ್ನು, ಎಲ್ಲವನ್ನೂ ಸಹ ನಿಯಂತ್ರಿಸುತ್ತಿದ್ದಾರೆ. ಅವರು ಶಿಕ್ಷಣ ಸಂಸ್ಥೆಗಳ ಮೂಲಕ ಯಾವುದನ್ನು "ಬೂರ್ಶ್ವಾ (ಬಂಡವಾಳಶಾಹಿಪರ) ಸಿದ್ದಾಂತ" ಎಂದು ಕರೆಯಲಾಗುತ್ತದೆಯೋ ಅದನ್ನು ಉತ್ಪಾದಿಸುತ್ತಾರೆ ಮತ್ತು ಎಲ್ಲೆಡೆ ಹರಡುತ್ತಾರೆ, ಜಗತ್ತಿನ ಮೇಲೆ ಹೇರುತ್ತಾರೆ ಮತ್ತು ಲೋಕದ ಕಲ್ಪನೆಗಳಲ್ಲಿ ಹಾಗೂ ನೀತಿಯಲ್ಲಿ ಅದನ್ನೇ ತುಂಬುತ್ತಾರೆ. ಈ ಸಿದ್ಧಾಂತವು ಸೃಷ್ಟಿ ಮಾಡುವ ಕಾನೂನುಗಳು ಖಾಸಗಿ ವ್ಯಕ್ತಿಗಳ ಕೈಯಲ್ಲಿ ಯಾವುದೇ ಪ್ರಮಾಣದಲ್ಲಿ ಭೂಮಿ ಇರಬಹುದು ಎಂದು ಹಾಗೂ ವಂಶಪಾರಂಪರ್ಯವಾಗಿ ಅದನ್ನು ಒಬ್ಬರಿಂದ ಇನ್ನೊಬ್ಬರಿಗೆ ವರ್ಗಾಯಿಸಬಹುದು ಅಥವಾ ಮಾರಾಟ ಮಾಡಬಹುದು ಎಂದು ಹೇಳುತ್ತದೆ ಮತ್ತು ಇನ್ನೊಂದಷ್ಟು ಕಾನೂನುಗಳ ಸಮೂಹದ ಮೂಲಕ ಪ್ರತಿಯೊಬ್ಬ ಪ್ರಜೆಯೂ ಸಹ ಏನನ್ನೂ ಪ್ರಶ್ನಿಸದೆ ತನ್ನ ಮೇಲೆ ಹೇರಲ್ಪಟ್ಟ ತೆರಿಗೆಗಳನ್ನು ಸಂದಾಯ ಮಾಡಬೇಕು ಎನ್ನುತ್ತದೆ. ಒಂದಷ್ಟು ಕಾನೂನುಗಳ ಮೂಲಕ ಯಾವುದೇ ವ್ಯಕ್ತಿಯು ಒಂದಷ್ಟು ಪ್ರಮಾಣದಲ್ಲಿ ವಸ್ತುಗಳನ್ನು ಗಳಿಸಿಕೊಂಡರೆ ಅದು ಅವರದೇ ಆಸ್ತಿ ಎನ್ನುತ್ತದೆ.

ಇಂತಹ ಬೋಧನೆಗಳ ಮೂಲಕ ಕಾರ್ಮಿಕರು ಮತ್ತು ರೈತರು ಯಾವ ಪ್ರಶ್ನೆಯೂ ಇಲ್ಲದೆ ನಿರಂಕುಶ ಸರ್ಕಾರಗಳನ್ನು ಒಪ್ಪಿಕೊಳ್ಳುತ್ತಾರೆ ಹಾಗೂ ಬಂಡವಾಳಗಾರರನ್ನು ನಿಯಂತ್ರಿಸಿ ತಮ್ಮ ಸ್ವಾತಂತ್ರ್ಯವನ್ನು ಗಳಿಸಿಕೊಳ್ಳಬಹುದಾದ ಅವರ ಶಕ್ತಿಗೆ ಲಕ್ವ ಹೊಡೆದಂತಾಗುತ್ತದೆ. ಸಮಾಜದಲ್ಲಿ ಬಡವರು ಯಾವತ್ತೂ ಇರಲೇಬೇಕಾಗುತ್ತದೆ ಎಂದು ಬಂಡವಾಳಗಾರರು ಬೋಧಿಸುತ್ತಾರೆ. ಗುಲಾಮ ಪದ್ಧತಿಯು ಅಸ್ತಿತ್ವದಲ್ಲಿದ್ದಾಗಲೂ ಇವರಂಥವರು ಅದೇ ರೀತಿಯಲ್ಲಿ ಗುಲಾಮಗಿರಿ ಮತ್ತು ಜೀತದಾಳು ಪದ್ಧತಿಗಳು ಸಮಾಜವನ್ನು ನಡೆಸಿಕೊಂಡು ಹೋಗಲು ಅವಶ್ಯಕ ಎಂದು ಅದನ್ನು ಬಲಾತ್ಕಾರದಿಂದ ನಿಷೇಧಿಸುವವರೆಗೂ ವಾದಿಸುತ್ತಲೇ ಇದ್ದರು. ಶಾಂತಿಯುತ ವಿಧಾನಗಳು ಏನನ್ನೂ ಸಾಧಿಸುವುದಿಲ್ಲ. ಏಕೆಂದರೆ ಅನ್ಯಾಯಯುತ ವ್ಯವಸ್ಥೆಯನ್ನು ಮುಂದುವರೆಸಿಕೊಂಡು ಹೋಗಲು ಬಂಡವಾಳಶಾಹಿ ನಿರಂಕುಶಾಧಿಕಾರವು ಏನನ್ನು ಬೇಕಾದರೂ ಮಾಡಲು ಸಿದ್ಧವಿರುತ್ತದೆ. ಒಂದು ಧಾರ್ಮಿಕ ನಂಬಿಕೆಯೊಂದಿಗೆ ಬರುವಂತಹ ಅಂಧಶ್ರದ್ಧೆಯಿಂದ ಪ್ರೇರಿತವಾದ ರೈತ ಕಾರ್ಮಿಕರ ಸಶಸ್ತ್ರ ಕ್ರಾಂತಿ ಒಂದೇ ಪರಿಹಾರ ಮತ್ತು ಅಂತಹ ಕ್ರಾಂತಿಯು ಜಗತ್ತಿನ ಎಲ್ಲ ಬಂಡವಾಳಶಾಹಿ ರಾಜ್ಯ ಒಕ್ಕೂಟಗಳ ವಿರುದ್ಧ ಹೋರಾಡಲು ಸಿದ್ಧವಿರಬೇಕು ಮತ್ತು ಯಾರಿಂದಲೂ ನೆರವನ್ನು ನಿರೀಕ್ಷಿಸಬಾರದು. ಮಾರ್ಕ್ಸ್‌ವಾದಿಗಳಿಗೆ ಮತ್ತು ಬೋಲ್ಶೆವಿಕ್ಕರಿಗೆ ವಿರೋಧಿಗಳೆನಿಸಿಕೊಂಡ ಸುಪ್ರಸಿದ್ಧ ಲೇಖಕರೊಬ್ಬರು ಹೀಗೆನ್ನುತ್ತಾರೆ: "ಬಂಡವಾಳಶಾಹಿ ಜಗತ್ತು, ಸೋವಿಯತ್ ರಷ್ಯಾದ ಕುರಿತು ಹೊಂದಿರುವ ಧೋರಣೆಯನ್ನು, ಮೈತ್ರಿ ಒಕ್ಕೂಟವು ಕೇಂದ್ರ ಶಕ್ತಿಗಳ (ಮೊದಲನೇ ಮಹಾಯುದ್ಧದಲ್ಲಿ ಮೈತ್ರಿ/ಎಂಟೆಂಟೇ ಎಂದರೆ ಇಂಗ್ಲೆಂಡ್, ಫ್ರಾನ್ಸ್ ಮತ್ತು ರಷ್ಯಾ. ಹಾಗೆಯೇ ಕೇಂದ್ರ ಶಕ್ತಿಗಳು ಎಂದರೆ ಜರ್ಮನಿ, ಆಸ್ಟ್ರಿಯ ಮತ್ತು ಹಂಗೆರಿ, ಬಲ್ಗೇರಿಯ ಮತ್ತು ಟರ್ಕಿ - ಅನುವಾದಕರು) ಬಗ್ಗೆ ಹೊಂದಿರುವ ಧೋರಣೆಯನ್ನು, ಇಂಗ್ಲೆಂಡ್ ದೇಶವು, ಐರ್ಲೆಂಡ್ ಮತ್ತು ಭಾರತದ ಕುರಿತು ಹೊಂದಿರುವ ಧೋರಣೆಯನ್ನು ನೋಡಿದರೆ, ಅವರ ಸ್ಥಾನಕ್ಕೆ ಚ್ಯುತಿ ಬಂದಲ್ಲಿ ಈ ಅಧಿಕಾರಸ್ತರು ಯಾವುದೇ ಮಟ್ಟದ ದ್ರೋಹ, ಕ್ರೌರ್ಯ ಮತ್ತು ಪಾಶವೀ ವರ್ತನೆಗೆ ಹೇಸುವುದಿಲ್ಲ ಎನಿಸುತ್ತದೆ. ಇವರನ್ನು ಅಧಿಕಾರದಿಂದ ಕಿತ್ತೊಗೆಯಲು ಯಾವುದಾದರೊಂದು ರೀತಿಯ ಅಂಧಾಭಿಮಾನವು ಅವಶ್ಯಕವಾದರೆ ಆಗ ಫಲಿತಾಂಶವಾಗಿ ಉದ್ಭವಿಸುವ ಆ ಕೆಡುಕಿಗೆ ಅವರೇ ಮುಖ್ಯ ಕಾರಣವಾಗಿರುತ್ತಾರೆ. ಅವರು ಅಧಿಕಾರವನ್ನು ಕಳೆದುಕೊಂಡಾಗ ಚರಿತ್ರೆಯಲ್ಲಿ ಹಿಂದೆ ಎಲ್ಲಾ ಅಂಧಾಭಿಮಾನಗಳು ನೇಪಥ್ಯಕ್ಕೆ ಸರಿದಂತೆ ಈ ಅಂಧಾಭಿಮಾನ ಸಹ ಹೊರಟು ಹೋಗುತ್ತದೆ ಎಂದು ಆಶಿಸುವುದು ತಪ್ಪಾಗುವುದಿಲ್ಲವೇನೋ!" (ಬರ್ಟೆಂಡ್ ರಸೆಲ್)

ಸಶಸ್ತ್ರ ಕ್ರಾಂತಿ ಎಂಬ ಈ ಮೂರನೆಯ ವಿಧಾನದ ಅನುಷ್ಠಾನದ ನಂತರ ಬಂಡವಾಳವಾದದ ಗೈರುಹಾಜರಿಯಲ್ಲಿ ಅವಶ್ಯಕವಾಗುವ ಸರ್ಕಾರದ ಸ್ವರೂಪವೆಂದರೆ, 'ಕಾರ್ಮಿಕ ವರ್ಗದ ಸರ್ವಾಧಿಕಾರ' ಮತ್ತು ಅದೇನೂ ಆ ಪ್ರಭುತ್ವದ ಶಾಶ್ವತ ಲಕ್ಷಣವಲ್ಲ. ಏಕೆಂದರೆ ಎಲ್ಲರೂ ಶ್ರಮಜೀವಿಗಳಾಗಿ ಯಾರೊಬ್ಬರೂ ಬಂಡವಾಳಗಾರರಾಗಿರುವುದಿಲ್ಲ ಎಂದಾಗ ಮತ್ತು ಶ್ರಮಜೀವಿ ವರ್ಗ ಮತ್ತು ಇಡಿಯ ಪ್ರಭುತ್ವವು ಒಂದೇ ಎನ್ನುವಂತಾದಾಗ ಆ ಸರ್ವಾಧಿಕಾರವು ತನ್ನನ್ನೇ ವಿಸರ್ಜಿಸಿಕೊಳ್ಳುತ್ತದೆ.

ಬೋಲ್ಶೆವಿಕ್ಕರೆಂದರೆ ಎಲ್ಲ ರಷ್ಯಾಗಳ ನಿರಂಕುಶಾಧಿಕಾರಿಯ ಆಡಳಿತದಲ್ಲಿದ್ದ, ಶ್ವೇತ ರಷ್ಯಾದ ಹಿಮಾಚ್ಛಾದಿತ ಪ್ರದೇಶಗಳ ನಿವಾಸಿಗಳಾದ ಜನ. ಈ ಕಠೋರ ತತ್ವಗಳಲ್ಲಿ ಮತ್ತು ಅವುಗಳನ್ನು ಜಾರಿಗೊಳಿಸುವ ವಿಧಾನಗಳಲ್ಲಿ ಅಚಲ ನಂಬಿಕೆಯನ್ನು ಹೊಂದಿದ್ದು, ಈ ತತ್ವಶಾಸ್ತ್ರದ ಕಾರ್ಯಸಾಧುತ್ವವನ್ನು ಪ್ರದರ್ಶಿಸುತ್ತಾ ಇದೀಗ ರಷ್ಯಾ ದೇಶವನ್ನು ಆಳುತ್ತಿರುವವರು. ಬೋಲ್ಶೆವಿಕ್ಕರು ತಮ್ಮನ್ನು ತಾವು ಎಲ್ಲ ಕಮ್ಯುನಿಸ್ಟರ ಮುಂಚೂಣಿಯಲ್ಲಿರುವವರು ಎಂದು ಬಣ್ಣಿಸಿಕೊಳ್ಳುತ್ತಾರೆ. ಈ ಕಮ್ಯುನಿಸ್ಟ್ ಸಿದ್ದಾಂತವು ಇಂಗ್ಲೆಂಡಿನ ಲೇಬರ್ ಪಕ್ಷದ ಕಾರ್ಯಕ್ರಮದಲ್ಲಿಯೂ ಭಾಗಶಃ ಅಭಿವ್ಯಕ್ತಿಸಲ್ಪಟ್ಟಿದೆ. ಅವುಗಳನ್ನು

ಈ ನಾಲ್ಕು ಪ್ರತಿಪಾದನೆಗಳಲ್ಲಿ ಮಂಡಿಸಲಾಗಿದೆ 1. ರಾಷ್ಟ್ರೀಯ ಕನಿಷ್ಠ ಆದಾಯವನ್ನು ಸಾರ್ವತ್ರಿಕವಾಗಿ ಜಾರಿಗೊಳಿಸುವುದು 2. ಕೈಗಾರಿಕೆಯ ಮೇಲೆ ಜನತಾಂತ್ರಿಕ ನಿಯಂತ್ರಣವನ್ನು ಸಾಧಿಸುವುದು 3. ರಾಷ್ಟ್ರೀಯ ಹಣಕಾಸಿನಲ್ಲಿ ಕ್ರಾಂತಿಕಾರಿ ಕಾರ್ಯಕ್ರಮವನ್ನು ಅಳವಡಿಸುವುದು 4. ಹೆಚ್ಚುವರಿ ಸಂಪತ್ತನ್ನು ಎಲ್ಲರ ಒಳಿತಿಗಾಗಿ ಮೀಸಲಿಡುವುದು. (ಇದನ್ನು 1918 ರ ಜೂನ್ ತಿಂಗಳಿನ ಸಮ್ಮೇಳನದಲ್ಲಿ ಅಳವಡಿಸಿಕೊಳ್ಳಲಾಯಿತು). ಬೋಲ್ಶೆವಿಕ್ಕರಿಗೂ ಮತ್ತು ಬ್ರಿಟಿಷ್ ಲೇಬರ್ ಪಕ್ಷಕ್ಕೂ ಇರುವ ವ್ಯತ್ಯಾಸವೇನೆಂದರೆ, ಮೊದಲನೆಯ ಗುಂಪಿನವರು ಶಸ್ತ್ರಾಸ್ತ್ರಗಳನ್ನು ಹೊಂದಿರುವ ಬಂಡವಾಳವಾದದ ವಿರುದ್ಧ ಮಿಲಿಟರಿ ದಾಳಿ ನಡೆಸಬೇಕೆಂದು ಉತ್ಸಾಹದಿಂದ ವಾದಿಸಿದರೆ, ಎರಡನೆಯವರು ತಮ್ಮ ಗುರಿಗಳನ್ನು ಸಂಸತ್ತಾತ್ಮಕ ವಿಧಾನದ ಮೂಲಕ ಸಾಧಿಸಿಕೊಳ್ಳಬಹುದೆಂದು ನಂಬುತ್ತಾರೆ.

ಇಲ್ಲಿಯವರೆಗೂ ನಾವು ಅನೇಕ ಚಿಂತಕರು ಬಹಳಷ್ಟು ವಿಶ್ವಾಸವನ್ನು ಹೊಂದಿರುವ ಬೋಲ್ಶೆವಿಸಮ್ ಅಥವಾ ತೀವ್ರಗಾಮಿ ಕಮ್ಯುನಿಸಮ್‌ನ ಮೂಲಭೂತ ಪರಿಕಲ್ಪನೆಗಳನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಿದ್ದೇವೆ. ಈಗ ನಾವು ಈ ಹೊತ್ತಿನ ಸಾಮಾಜಿಕ ಕೆಡುಕುಗಳನ್ನು ಕೊನೆಗಾಣಿಸಲು ಪ್ರಯತ್ನಿಸುವ ಗಾಂಧಿವಾದದ ಪರಿಕಲ್ಪನೆಗಳು ಮತ್ತು ವಿಧಾನಗಳನ್ನು ಗ್ರಹಿಸಲು ಪ್ರಯತ್ನಿಸೋಣ.

ಗಾಂಧಿವಾದವು ನಮ್ಮ ಕಾಲದ ಸಮಾಜವು ಯಾವ ಕೆಡುಕುಗಳಿಂದ ಪೀಡಿಸಲ್ಪಟ್ಟಿದೆಯೋ, ಯಾವ ಕೆಡುಕುಗಳು ಬಂಡವಾಳದ ಆಳ್ವಿಕೆಯಿಂದ ಹೊರಹೊಮ್ಮುತ್ತಿವೆಯೋ ಅವುಗಳೆಲ್ಲವನ್ನು ಗುರುತಿಸುತ್ತದೆ. ಬಂಡವಾಳವಾದವು ತನ್ನ ಆಳ್ವಿಕೆಯನ್ನು ಉಳಿಸಿಕೊಳ್ಳಲು ಯಾವ ಅಧಃಪಾತಕ್ಕೂ ಬೇಕಿದ್ದರೂ ಇಳಿಯುತ್ತದೆ ಮತ್ತು ಇಂದಿನ ಸಮಾಜವನ್ನು ಕಾಪಾಡಲು ಒಂದು ಕ್ರಾಂತಿಯ ಮೂಲಕ ಅಥವಾ ತೀವ್ರಗಾಮಿ ಬದಲಾವಣೆಯ ಮೂಲಕ ಮಾತ್ರ ಸಾಧ್ಯ ಎಂಬುದನ್ನು ಅದು ಒಪ್ಪಿಕೊಳ್ಳುತ್ತದೆ. ಆದರೆ ಬೋಲ್ಶೇವಿಸಮ್ ಮತ್ತು ಗಾಂಧಿವಾದ ಇವುಗಳು ಅಂತಹ ಸಾಮಾಜಿಕ ಕ್ರಾಂತಿಯನ್ನು ನೆರವೇರಿಸುವ ವಿಧಾನಗಳಲ್ಲಿ ಮಾತ್ರ ಸಂಪೂರ್ಣವಾಗಿ ಒಂದಕ್ಕೊಂದು ವಿರುದ್ಧವಾಗಿವೆ. ಆಧುನಿಕ ಕೈಗಾರಿಕೀಕರಣವು ಪರಿಚಯಿಸಿರುವ ಆಧುನಿಕ ಸಾಮಾಜಿಕ ಪದ್ಧತಿಗಳ ಮತ್ತು ವಿಭಾಗಿಕರಣಗಳ ತಳಹದಿಯನ್ನೇ ಗಾಂಧಿವಾದವು ದಾಳಿಗೆ ಒಳಪಡಿಸುತ್ತದೆ. ಬಂಡವಾಳವಾದವು ಪುರಾತನ ಕಾಲದ ನಿರಂಕುಶಾಧಿಕಾರದ ಎಲ್ಲಾ ಕ್ರೌರ್ಯ ಮತ್ತು ದ್ರೋಹವನ್ನು ಹೊಂದಿದ್ದರೂ ಸಹ ಅದನ್ನು ಅಸ್ತಿತ್ವಕ್ಕೆ ತಂದ ಶಕ್ತಿ ಯಾವುದು ಮತ್ತು ಅದಕ್ಕೆ ಉಕ್ಕಿನಂತಹ ಅಧಿಕಾರದ ಹಕ್ಕನ್ನು ನೀಡಿದ ಶಕ್ತಿ ಯಾವುದು? ಬಹು ಸಂಖ್ಯಾತ ಕೂಲಿಕಾರರು ಕೆಟ್ಟ ಮನೆಗಳಲ್ಲಿ ವಾಸವಾಗಿದ್ದರೂ, ಕೆಟ್ಟ ಆಹಾರವನ್ನು ಸೇವಿಸುತ್ತಿದ್ದರೂ ಮತ್ತು ಬಡತನದ ರೇಖೆಗಿಂತ ಕೆಳಗಿದ್ದರೂ ಸಹ, ಈ ಜನ ಬಂಡವಾಳವಾದದ ಗುಲಾಮರಾಗಿದ್ದು ಹೇಗೆ? ಇದಕ್ಕಿರುವ ಖಚಿತವಾದ ಮತ್ತು ನಿಖರವಾದ ಉತ್ತರವೆಂದರೆ ಅದಕ್ಕೆ ಕಾರಣ ಆಧುನಿಕ ಕೈಗಾರಿಕೀಕರಣ ವ್ಯವಸ್ಥೆ. ಯಾಂತ್ರೀಕರಣ ಅಥವಾ ಯಂತ್ರಗಳ ಯುಗವು ತಮ್ಮ ತಮ್ಮ ಹಳ್ಳಿಗಳಲ್ಲಿನ ಆರೋಗ್ಯಕರ ವಾತಾವರಣದಲ್ಲಿ ಮತ್ತು ವೃತ್ತಿ ಸಮುದಾಯಗಳಲ್ಲಿ ಸ್ವತಂತ್ರರಾಗಿದ್ದ ಕೆಲಸಗಾರರನ್ನು ಅಲ್ಲಿಂದ ಓಡಿಸಿ ಬಂಡವಾಳಗಾರರ ಅಣತಿಗೆ ಅನುಗುಣವಾಗಿ ಪ್ಲಾಂಟೇಶನ್‌ಗಳಲ್ಲಿ ಹಾಗೂ ಕೈಗಾರಿಕೆಗಳಲ್ಲಿ ಅವರು ಒಟ್ಟಾಗಿ ಸೇರಿ ದುಡಿಯುವಂತೆ ಮಾಡಿತು. ಯಾಂತ್ರೀಕರಣವು ಬೃಹತ್ ಪ್ರಮಾಣದ ಉತ್ಪಾದನೆಯನ್ನು ಸಾಧ್ಯವಾಗಿಸಿತು ಮತ್ತು ಕೈಗಾರಿಕೆಗಳಲ್ಲಿ ಮಾನವೀಯ ಅಂಶವನ್ನು ತಿರಸ್ಕರಿಸಿತು ಹಾಗೂ ಕೆಲವೇ ಕೆಲವು ಜನ ಅಹಂಕಾರಿಗಳು ಅಪಾರ ಸಂಪತ್ತನ್ನು ಸಂಗ್ರಹಿಸಿಕೊಂಡು ಮಿಲಿಯಾಂತರ ಜನರ ಒಡೆಯರಾಗುವಂತೆ ಮಾಡಿತು. ಗಾಂಧಿವಾದವು ಟಾಲ್‌ಸ್ಟಾಯ್ ಅವರಿಂದ ಪ್ರೇರಣೆ ಪಡೆದಿದ್ದು, ಗಾಂಧಿವಾದಿಯೊಬ್ಬನು ಟಾಲ್‌ಸ್ಟಾಯ್ ಅವರಂತೆಯೇ ವಾದಿಸುತ್ತಾನೆ: "ಕಾರ್ಮಿಕರ ದಯನೀಯ ಪರಿಸ್ಥಿತಿಯನ್ನು ಬಂಡವಾಳಗಾರರಿಂದ ಉತ್ಪಾದನಾ ಸಾಧನಗಳನ್ನು ಕಸಿದುಕೊಳ್ಳುವುದರಿಂದ ಸಾಧಿಸಲಾಗುವುದಿಲ್ಲ. ಈ ಸಮಸ್ಯೆಯ ಹಿಂದಿನ ನಿಜವಾದ

ಕಾರಣವು ಅವರನ್ನು ಹಳ್ಳಿಗಳಿಂದ ಹೊರಗಟ್ಟಿರುವುದರಲ್ಲಿ ಇದೆಯೇ ಹೊರತು, ರೈಲ್ವೆ ಸೇವೆಯಲ್ಲಿ ಅಥವಾ ಯಾವುದೇ ಕಾರ್ಖಾನೆ ಅಥವಾ ಕಾರ್ಯಾಗಾರದಲ್ಲಿ ಅತಿ ಹೆಚ್ಚು ಘಂಟೆಗಳ ಕಾಲ ಕೆಲಸ ಮಾಡುವುದರಲ್ಲಿ ಇಲ್ಲ ಮತ್ತು ಪರಿಹಾರವು ಕಡಿಮೆ ಗಂಟೆಗಳ ಕೆಲಸವಲ್ಲ, ಏಕೆಂದರೆ ಭೂಮಿಯಲ್ಲಿ ಕೆಲಸ ಮಾಡುವ ಕೃಷಿಕಾರರು ಕೆಲವೊಮ್ಮೆ ದಿನಕ್ಕೆ 18 ಗಂಟೆ ದುಡಿಯುತ್ತಾರೆ ಮತ್ತು ಸತತವಾಗಿ 36 ಗಂಟೆಗಳ ಕಾಲ ದುಡಿಯುವುದೂ ಉಂಟು. ಆದರೂ ಸಹ ಅವರು ತಮ್ಮ ಬದುಕು ಸಂತೋಷಮಯ ಎಂದು ಭಾವಿಸುತ್ತಾರೆ. ಹಾಗೆಯೇ ಅವರ ಯಾತನೆಗೆ ಕಾರಣ ಅವರ ಕೂಲಿ ಕಡಿಮೆ ಎಂಬುದಲ್ಲ ಅಥವಾ ರೈಲ್ವೆಯಾಗಲೀ ಕಾರ್ಖಾನೆಯಾಗಲೀ ಅವರಿಗೆ ಸೇರಿದ್ದಲ್ಲ ಎಂಬುದಲ್ಲ. ಬದಲಿಗೆ ಅವರ ಯಾತನೆಗೆ ಕಾರಣವಿರುವುದು ಅವರು ಅತ್ಯಂತ ಹಾನಿಕಾರಕವಾದ, ಅಸಹಜವಾದ ಮತ್ತು ಅನೇಕ ಬಾರಿ ಅಪಾಯಕಾರಿಯಾದ ಹಾಗೂ ವಿನಾಶಕಾರಿಯಾದ ಪರಿಸ್ಥಿತಿಗಳಲ್ಲಿ ಕೆಲಸ ಮಾಡಬೇಕಾಗುತ್ತದೆ ಮತ್ತು ಪಟ್ಟಣಗಳಲ್ಲಿನ ಅತ್ಯಂತ ಕಿರಿದಾದ ಮನೆಗಳಲ್ಲಿ ವಾಸ ಮಾಡಬೇಕಾಗುತ್ತದೆ ಹಾಗೂ ಆ ಬದುಕಿನ ತುಂಬಾ ಕೆಟ್ಟ ಸೆಳೆತಗಳಿರುತ್ತವೆ, ಅನೈತಿಕತೆ ಇರುತ್ತದೆ ಮತ್ತು ಇನ್ನೊಬ್ಬರ ಒತ್ತಾಯಕ್ಕೆ ಕೆಲಸ ಮಾಡಬೇಕಾಗಿ ಬಂದಿರುತ್ತದೆ ಎಂಬುದರಲ್ಲಿದೆ". ಗಾಂಧಿವಾದಿಗಳ ಪ್ರಕಾರ ಇದಕ್ಕೆ ಕಾರಣ ಆಧುನಿಕ ಯಾಂತ್ರೀಕರಣ, ವಾಸ್ತವವಾಗಿ ಇಡೀ ಆಧುನಿಕ ನಾಗರಿಕತೆ. ಇದೇ ತರ್ಕವನ್ನು ಮುಂದುವರಿಸಿದರೆ ಆಗ ನಮ್ಮ ಕಾಲದ ಕೆಡುಕುಗಳನ್ನು ಕೊನೆಗಾಣಿಸಲು ನಾವು ಆಧುನಿಕ ಯಾಂತ್ರೀಕೃತ ಯುಗವನ್ನೇ ನಾಶ ಮಾಡಬೇಕು ಎಂಬ ತೀರ್ಮಾನಕ್ಕೆ ಬರಬೇಕು. ಯಾಂತ್ರೀಕರಣವು ಕಡಿಮೆ ಖರ್ಚಿನಲ್ಲಿ ಅನೇಕ ಸೌಲಭ್ಯಗಳು ಸಿಗುವಂತೆ ಮಾಡಿದೆ ಮತ್ತು ಇದರಿಂದಾಗಿ ಸಮಾಜದಲ್ಲಿ ಸೋಮಾರಿತನವು ಹುಟ್ಟಿಕೊಂಡಿದೆ ಮತ್ತು ಇದರಿಂದಾಗಿಯೇ ಇನ್ನೊಬ್ಬರ ಶ್ರಮದ ಮೇಲೆ ಬದುಕುವಂತಹ ವರ್ಗವು ಸಹ ಸೃಷ್ಟಿಯಾಗಿದೆ. ಇದನ್ನು ಕೊನೆಗಾಣಿಸಬೇಕೆಂದರೆ ಮನುಷ್ಯನು ತನ್ನ ಅವಶ್ಯಕತೆಗಳನ್ನು ಕಡಿಮೆ ಮಾಡಿಕೊಳ್ಳಬೇಕು ಮತ್ತು ಅದೇ ಸಮಯದಲ್ಲಿ ಪ್ರತಿಯೊಬ್ಬರೂ ತಮ್ಮ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ತಾವೇ ಕೆಲಸ ಮಾಡಬೇಕು. ಯಾರೂ ಸೋಮಾರಿಯಾಗಿ ಉಳಿಯಬಾರದು, ಏಕೆಂದರೆ "ಸೋಮಾರಿ ಒಬ್ಬ ಕಳ್ಳ" (ರೂಸೋ).

ಇದಕ್ಕೆ ಗಾಂಧಿವಾದವು ಸೂಚಿಸುವ ಪರಿಹಾರವೆಂದರೆ, ಶ್ರಮಿಕರ ಸಮುದಾಯವನ್ನು ಸಣ್ಣ ಸಣ್ಣ ಘಟಕಗಳಾಗಿ ಒಡೆಯುವ ಕೈಮಗ್ಗದಲ್ಲಿ ನೂಲುವುದು ಮತ್ತು ನೇಯುವುದು ಮುಂತಾದ ಹಳೆಯ ವಿಧಾನಗಳಲ್ಲಿ ತೊಡಗಿಸುವುದು. ಇಂದು ಒಂದು ರಾಷ್ಟ್ರವು ಬಟ್ಟೆ ಮತ್ತಿತರ ವಿಲಾಸಿ ಪದಾರ್ಥಗಳನ್ನು ಬೃಹತ್ ಪ್ರಮಾಣದಲ್ಲಿ ಉತ್ಪಾದಿಸುತ್ತಿದೆ ಮತ್ತು ತನ್ಮೂಲಕ ಜಗತ್ತಿನ ಎಲ್ಲ ಮಾರುಕಟ್ಟೆಗಳಿಗೂ ಸರಬರಾಜು ಮಾಡುತ್ತಿದೆ. ಇದರಿಂದಾಗಿ ಇತರ ದೇಶಗಳ ಕಾರ್ಮಿಕರಲ್ಲಿ ನಿರುದ್ಯೋಗ ಮತ್ತು ದಾರಿದ್ರ್ಯಗಳು ಹೆಚ್ಚಾಗುತ್ತಿವೆ. ಕೈಯಿಂದ ನೂಲುವುದು ಮತ್ತು ನೇಯುವುದು ಇವು ಈ ಮಹತ್ವಾಕಾಂಕ್ಷೆಯನ್ನು ಅಸಾಧ್ಯವನ್ನಾಗಿಸುತ್ತವೆ. ಅದು ಕಾರ್ಮಿಕನೊಬ್ಬನು ತನ್ನ ಹಳ್ಳಿಗಾಡಿನ ಸ್ವತಂತ್ರ ವಾತಾವರಣದಿಂದ ದೂರ ಹೋಗುವಂತೆ ಮತ್ತು ಬಂಡವಾಳಶಾಹಿಯ ಗುಲಾಮಗಿರಿಗೆ ಶರಣಾಗುವಂತೆ ಮಾಡುವುದಿಲ್ಲ. ಆದರೆ ಆಧುನಿಕ ನಾಗರಿಕತೆಯನ್ನು ಇಲ್ಲವಾಗಿಸಲು ಗಾಂಧಿವಾದವು ಮುಂದಿಡುವ ಕಾರ್ಯಕ್ರಮದಲ್ಲಿ ಇದು ಒಂದು ಶಾಖೆ ಅಷ್ಟೇ. ದೈತ್ಯಾಕಾರದ ಯಾಂತ್ರೀಕರಣವು ನಿರಂಕುಶಾಧಿಕಾರವನ್ನು, ಕಾರ್ಖಾನೆಗಳನ್ನು, ರೈಲ್ವೆ ಇತ್ಯಾದಿಗಳನ್ನು ಬೆಂಬಲಿಸುತ್ತಾ ಜನತೆಯ ಸಂಕಟಗಳನ್ನು ಹೆಚ್ಚಿಸುತ್ತದೆ. ಮಾನವ ಸಮಾಜವನ್ನು ಉಳಿಸಬೇಕೆಂದರೆ ವರ್ಗ ಸಂಘರ್ಷವು ತೊಲಗಬೇಕು. ಆದರೆ ಮನುಷ್ಯರು ತಾವು ದೀರ್ಘಕಾಲದಿಂದಲೂ ಶಿಕ್ಷಣ ಮತ್ತು ಸಂಪ್ರದಾಯದಿಂದ ರೂಢಿಸಿಕೊಂಡಿರುವ ಕಲ್ಪನೆಗಳನ್ನು ಮತ್ತು ಅಭ್ಯಾಸಗಳನ್ನು ಬಿಟ್ಟುಕೊಡುತ್ತಾರೆಯೇ? ಹಾಗಾಗಿ ಇವೆಲ್ಲವುಗಳ ಮೂಲ ಬೇರು ಇರುವುದು ಮನುಷ್ಯರ ಮನಸ್ಸಿನಲ್ಲಿ. ಹೀಗಾಗಿ ಪರಿಹಾರವೂ ಮನುಷ್ಯರ ಮನಸ್ಸಿನಲ್ಲಲ್ಲದೆ ಬೇರೆಲ್ಲೂ ಇರಲು ಸಾಧ್ಯವಿಲ್ಲ. ಪರಿಹಾರವು ಮನಸ್ಸನ್ನು "ಶುದ್ಧೀಕರಿಸುವುದರಲ್ಲಿದೆ". ಆದ್ದರಿಂದ ಗಾಂಧಿವಾದವು ಕಾರ್ಮಿಕರಿಗೆ ಹೀಗೆಂದು ಹೇಳುತ್ತದೆ: "ಸರ್ಕಾರಗಳು ಮತ್ತು

ಶ್ರೀಮಂತರು ತಮ್ಮ ಬದುಕನ್ನು ನಾಶ ಮಾಡದಂತೆ ನೋಡಿಕೊಳ್ಳಬೇಕೆಂದರೆ ಕಾರ್ಮಿಕರು ತಮ್ಮನ್ನೇ ಶುದ್ಧೀಕರಿಸಿಕೊಳ್ಳಬೇಕು. ಅಶುದ್ಧತೆಯು ಕೊಳಕಿನಲ್ಲಿ ಹುಟ್ಟಿ ಬೆಳೆಯುತ್ತದೆ ಮತ್ತು ಯಾವ ದೇಹಗಳು ಅಶುಚಿಯಾಗಿರುತ್ತವೋ ಅವುಗಳನ್ನು ಆಧರಿಸಿ ಬದುಕುತ್ತದೆ. ಆದ್ದರಿಂದ ತಮ್ಮನ್ನು ವಿನಾಶದಿಂದ ಬಿಡುಗಡೆಕೊಳಿಸಿಕೊಳ್ಳಲು ಕಾರ್ಮಿಕರಿಗಿರುವುದು ಒಂದೇ ದಾರಿ. ಅದೆಂದರೆ ತಮ್ಮನ್ನು ತಾವು ಶುದ್ಧೀಕರಿಸಿಕೊಳ್ಳುವುದು. ಮತ್ತು ಹಾಗೆ ಶುದ್ಧೀಕರಿಸಿಕೊಳ್ಳಬೇಕೆಂದರೆ ಅವರು ತಮ್ಮನ್ನು ಗೊಡ್ಡು ಧರ್ಮದಿಂದ, ಪ್ರಭುತ್ವದಿಂದ, ವೈಜ್ಞಾನಿಕ ಮೌಢ್ಯದಿಂದ ವಿಮೋಚಿತರನ್ನಾಗಿಸಿಕೊಳ್ಳುವುದು ಅವಶ್ಯಕ. ಹಾಗೆಯೇ ದೇವರಲ್ಲಿ ನಂಬಿಕೆ ಮತ್ತು ಆತನ ನಿಯಮದಲ್ಲಿ ವಿಶ್ವಾಸ ಸಹ ಅವಶ್ಯಕ" (ಟಾಲ್‌ಸ್ಟಾಯ್; ಸೋಷಿಯಲ್ ಇವಿಲ್ಸ್ ಅಂಡ್ ದೆರ್ ರಿಮಿಡಿ). ನಿರಂಕುಶಾಧಿಕಾರದಿಂದ ಯಾರೇ ಆಗಲಿ ತಮ್ಮನ್ನು ಸ್ವತಂತ್ರರನ್ನಾಗಿಸಿಕೊಳ್ಳಲು ಗಾಂಧಿವಾದವು ಒಂದು ವಿಧಾನವನ್ನು ಸೂಚಿಸುತ್ತದೆ ಮತ್ತು ಅದು ಬೋಲ್ಶೆವಿಕ್ ವಿಧಾನಕ್ಕೆ ತದ್ವಿರುದ್ಧವಾಗಿದೆ. ಪರಿಹಾರವನ್ನು ಮನುಷ್ಯನಿಂದ ಹೊರಗಡೆ ಹುಡುಕುವುದರಲ್ಲಿ ಯಾವುದೇ ಪ್ರಯೋಜನವಿಲ್ಲ. ಅದು ಇರುವುದು ಮನುಷ್ಯನ ಮನಸ್ಸಿನಲ್ಲಿ. ಸಮಗ್ರ ಆಲೋಚನೆಯ ವಿಧಾನವನ್ನೇ ಬದಲಾಯಿಸಿದಾಗ ಮಾತ್ರ ಮನುಷ್ಯನ ಬಾಹ್ಯಕ್ರಿಯೆಯಲ್ಲಿ ಬದಲಾವಣೆ ಸಾಧ್ಯ. ಏಕೆಂದರೆ ಕ್ರಿಯೆ ಎಂಬುದು ಮನುಷ್ಯನ ಚಿಂತನೆಯ ಬಾಹ್ಯ ಅಭಿವ್ಯಕ್ತಿ ಅಷ್ಟೇ. ವರ್ಗ ಸಮರ, ಹೋರಾಟ, ವೈಭವದ ಬದುಕು, ಅಹಂಕಾರ, ಶತ್ರುತ್ವ, ಅಧಿಕಾರದಾಹ ಇಂತಹ ಸಂಘರ್ಷಗಳಿಗೆ ಜನ್ಮ ನೀಡುವ ಪ್ರೇರಣೆಗಳನ್ನೇ ಇದಕ್ಕೆ ಬಲಿಯಾದ ಮನುಷ್ಯನ ಮನಸ್ಸಿನಿಂದ ಹೊರಗೆ ಹಾಕಲಾದರೆ, ಆಗ ಮನುಷ್ಯನು ವಿಮುಕ್ತನಾಗುತ್ತಾನೆ. ನೀವು ಆವಿಷ್ಕಾರಗಳನ್ನು ಎಷ್ಟರಮಟ್ಟಿಗಾದರೂ ಹೆಚ್ಚಿಸುತ್ತಾ ಹೋಗಬಹುದು, ಮನುಷ್ಯನ ಮಿತಿಗೆ ಹೊರತಾಗಿರುವ ಇಡೀ ಪ್ರಕೃತಿಯನ್ನು ಗೆದ್ದುಕೊಳ್ಳಬಹುದು ಆದರೆ ಇದರ ಫಲಿತಾಂಶ ಏನಾಗುತ್ತದೆ? ಸಂತೋಷವನ್ನು ಅರಸುವ ಅಂತಹ ಎಲ್ಲ ವಿಧಾನಗಳಿಗೂ ಅನ್ವಯವಾಗುವಂತಹ ಒಂದು ಶಾಶ್ವತ ನಿಯಮವಿದೆ.

ಅದೇನೆಂದರೆ, "ಮನುಷ್ಯನ ಇರುವಿಕೆಯು ಒಂದು ನಿಯಮಕ್ಕೆ ಅಧೀನವಾಗಿರುತ್ತದೆ. ಆ ನಿಯಮವು ಆತ್ಮತೃಪ್ತಿಯನ್ನು ಪಡೆಯಲು ಪ್ರಚೋದಿಸುವುದರೊಂದಿಗೆ ಆ ತೃಪ್ತಿಯು ಹೊರಗಿನಿಂದ ದೊರೆಯುವುದಿಲ್ಲವೆಂದೂ ತಿಳಿಸುತ್ತದೆ. ಆ ನಿಯಮದ ಅರಿವಿಲ್ಲದವರು ತೃಪ್ತಿಯನ್ನು ಹೊರಗಿನ ವಸ್ತುಗಳಲ್ಲಿ ಹುಡುಕುತ್ತಾರೆ". (ಟಿ.ಎಚ್. ಗ್ರೀನ್, ಪ್ರಿನ್ಸಿಪಲ್ಸ್ ಆಫ್ ಪೊಲಿಟಿಕಲ್ ಅಬ್ಲಿಕೇಶನ್, ಪುಟ 19).

ಈ ಸುಧಾರಣೆಯನ್ನು ತರುವ ಹಾದಿ ಯಾವುದು? ಬೋಲ್ಶೆವಿಕ್ಕರು ಅಧಿಕಾರಕ್ಕಾಗಿ ಆಗ್ರಹಿಸುತ್ತಾರೆ. ಅವರ ಪ್ರಕಾರ ಕಾರ್ಮಿಕವರ್ಗದ ಸರ್ವಾಧಿಕಾರವು ಮಾನವ ಮನಸ್ಸನ್ನು ಸುಧಾರಣೆಗೆ ಒಳಪಡಿಸುತ್ತದೆ, ಬಂಡವಾಳಗಾರರಿಂದ ಬಂಡವಾಳವನ್ನು ಕಸಿದುಕೊಳ್ಳುತ್ತದೆ ಮತ್ತು ಸಮಾಜದಲ್ಲಿರುವ ಪ್ರತಿಯೊಬ್ಬರಿಗೂ ಸರ್ವರ ಒಳಿತಿಗಾಗಿ ಕೆಲಸ ಮಾಡಲು ಕಲಿಸುತ್ತದೆ. ಗಾಂಧಿವಾದಿಗಳು ಹೇಳುವುದು ಸರ್ವರ ಒಳಿತಿಗಾಗಿ ಕೆಲಸ ಮಾಡುವ ಕರ್ತವ್ಯದ ಬಗ್ಗೆ ಮನುಷ್ಯರಿಗೆ ಖಂಡಿತವಾಗಿ ಮನವರಿಕೆ ಮಾಡಿಕೊಡಬೇಕು ಮತ್ತು ಈ ರೀತಿಯ ಮನವರಿಕೆಯನ್ನು ಕೇವಲ ಧರ್ಮದ ಮೂಲಕ ಮಾಡಲು ಸಾಧ್ಯ. "ನಿಮ್ಮ ಕೆಲಸವು ನೈತಿಕ ಸುಧಾರಣೆಯದ್ದು, ಅದು ವ್ಯಕ್ತಿಯ ಮರುಹುಟ್ಟಿಗೆ ಸಂಬಂಧಪಟ್ಟದ್ದಾಗಿರಬೇಕು. ಇದಿಲ್ಲದಿದ್ದರೆ ಯಾವುದೇ ರಾಜಕೀಯ ಸಂಘಟನೆಯು ಬರಡಾಗುತ್ತದೆ ಮತ್ತು ಯಶಸ್ಸಿನ ನಿರೀಕ್ಷೆಯಲ್ಲಿ ನೀವು ಭ್ರಮಗೆ ಒಳಗಾಗುತ್ತೀರಿ ಮತ್ತು ನಿಮ್ಮ ಕೆಲಸದಿಂದ ಧಾರ್ಮಿಕ ಕಲ್ಪನೆಯನ್ನು ಹೊರಗಿಟ್ಟುಬಿಡುತ್ತೀರಿ" (ಮ್ಯಾಜಿನಿ ಪುಟ 168). "ಕ್ರಾಂತಿಯ ಘೋಷಣೆ ಏನಿರಬೇಕೆಂದರೆ 'ದೇವರ ಇಚ್ಛೆ; ದೇವರ ಇಚ್ಛೆ' ಎಂದು. ಏಕೆಂದರೆ, 'ದೇವರಿಲ್ಲದೆ ನೀವು ಆಜ್ಞೆ ಮಾಡಲಾರಿರಿ, ಯಾರ ಮನಸ್ಸನ್ನೂ ಒಲಿಸಿಕೊಳ್ಳಲಾರಿರಿ. ನೀವು ಸರ್ವಾಧಿಕಾರಿಗಳಾಗಬಹುದೇ ಹೊರತು ಶಿಕ್ಷಕರಾಗಲಿ

ಸಂತರಾಗಲಿ ಆಗುವುದಿಲ್ಲ" (ಮ್ಯಾಜಿನಿ, ಪುಟ 29). ಒಂದು 'ಸಶಸ್ತ್ರ ಕ್ರಾಂತಿ' ಅಥವಾ ಹಿಂಸೆಯ ನಂತರ ಹುಟ್ಟಿಕೊಳ್ಳುವುದು ಹೊಸ ಸ್ವರೂಪದ ಸರ್ವಾಧಿಕಾರ ಮತ್ತು ಹಿಂಸೆಯೇ ಹೊರತು ಇನ್ನೇನೂ ಆಗಿರುವುದಿಲ್ಲ.

ಹೀಗಾಗಿ ಗಾಂಧಿವಾದವು ಮೊಟ್ಟಮೊದಲನೆಯದಾಗಿ ಮನುಷ್ಯನ ಸ್ವಭಾವದ ಬದಲಾವಣೆಯನ್ನು ಅಥವಾ ಶುದ್ಧೀಕರಣವನ್ನು ಆಶಿಸುತ್ತದೆ ಮತ್ತು ಅದು ಕಾಲಕ್ರಮೇಣ ವರ್ತಮಾನ ಜೀವನದ ವ್ಯವಸ್ಥೆಯ ಅವಶ್ಯಕತೆಯನ್ನು ನಾಶ ಪಡಿಸುತ್ತದೆ. ಅಹಂಕಾರ, ಪ್ರದರ್ಶನದ ಹಂಬಲ ಇವುಗಳನ್ನು ನಾಶಗೊಳಿಸಿರಿ, ಹಾಗಾದಾಗ ರೇಷ್ಮೆ ಬಟ್ಟೆಗಳನ್ನು, ವಿಲಾಸದ ವಸ್ತುಗಳನ್ನು ಉತ್ಪಾದಿಸಲು ಕೂಲಿ ಗುಲಾಮರನ್ನು ಕೆಲಸಕ್ಕೆ ಹಚ್ಚುವ ಅವಶ್ಯಕತೆ ಇರುವುದಿಲ್ಲ. ಭಯ ಮತ್ತು ಅಧಿಕಾರ ದಾಹವನ್ನು ನಾಶಗೊಳಿಸಿರಿ, ಯುದ್ಧಗಳು ನಿಲ್ಲುತ್ತವೆ, ಮಿಲಿಟರಿವಾದ ಮತ್ತು ಸರ್ಕಾರಗಳು ಕರಗಿ ಹೋಗುತ್ತವೆ. ಮನುಷ್ಯನೊಳಗಿರುವ ಪಿಶಾಚಿಯನ್ನು ನಾಶಪಡಿಸಿ, ಆಗ ಹೊರಗಿನ ಅಸಂಬದ್ಧತೆಗಳ ಸ್ವಭಾವವು ಸತ್ತು ಹೋಗುತ್ತದೆ. ಇದಕ್ಕೆ ಲೆನಿನ್ ಹೀಗೆಂದು ಉತ್ತರಿಸಬಹುದು, 'ಇಂದಿನ ಜಗತ್ತನ್ನು ಮತ್ತು ದೇವರನ್ನು ಸಹ ನಾಶ ಮಾಡಿ, ಅದೇ ಇದೆಲ್ಲಕ್ಕೂ ಮೂಲ ಮತ್ತು ಅದರಿಂದ ಇದೆಲ್ಲವೂ ನಿಂತು ಹೋಗುತ್ತದೆ. ಇದು ಮಾನಸಿಕ ಅಸ್ವಸ್ಥನೊಬ್ಬನ ತರ್ಕ, ಇದು ಅಸಾಧ್ಯವಾದದ್ದು'.

ಭಾರತದಲ್ಲಿ ಅನೇಕರು ಅಂದುಕೊಂಡಿರುವುದೇನೆಂದರೆ, ಅಹಿಂಸೆ ಮತ್ತು ಧಾರ್ಮಿಕ ಸುಧಾರಣೆಯ ಗಾಂಧಿವಾದದ ತತ್ವಗಳು ಭಾರತದಲ್ಲಿನ ವಿಶಿಷ್ಟ ಪರಿಸ್ಥಿತಿಗಳಿಂದಾಗಿ ಉದ್ಭವಿಸಿದವು; ಗಾಂಧಿವಾದವು ಅಹಿಂಸೆಯನ್ನು ಪ್ರತಿಪಾದಿಸುವುದೇಕೆಂದರೆ ಇಲ್ಲಿನ ಸರ್ಕಾರದ ವಿರುದ್ಧ ಹಿಂಸೆಯನ್ನು ಉಪಯೋಗಿಸುವುದು ಸಾಧ್ಯವಿಲ್ಲ ಎಂದು. ಸಶಸ್ತ್ರ ಕ್ರಾಂತಿಯು ಅಸಾಧ್ಯವಾದುದರಿಂದ ಅಹಿಂಸೆಯು ಇಲ್ಲಿನ ಆಚರಣೆಯಾಗಿದೆ ಎಂದು. ಆದರೆ ಹೀಗೆಂದುಕೊಳ್ಳುವುದು ಬಹಳ ದೊಡ್ಡ ತಪ್ಪಾಗುತ್ತದೆ. ಗಾಂಧಿಯವರನ್ನೇನಾದರೂ ಈ ಕ್ಷಣದಲ್ಲಿ ಲೆನಿನ್ ಅವರ ಪೀಠಕ್ಕೆ ಏರಿಸಿದರೂ, ಅವರು ಕೂಡಲೇ ರೆಡ್ ಗಾರ್ಡ್ಸ್ ಎಂಬ ಅಲ್ಲಿನ ಸೈನ್ಯವನ್ನು ಹಾಗೂ ಕಾರ್ಮಿಕ ವರ್ಗದ ಸರ್ವಾಧಿಕಾರವನ್ನು ವಿಸರ್ಜಿಸುತ್ತಾರೆ. ಅವರು ರಷ್ಯಾದಲ್ಲಿನ ಕೈಗಾರಿಕೀಕರಣವನ್ನು ನಿಲ್ಲಿಸುತ್ತಾರೆ ಮತ್ತು ಆ ದೇಶದ ಕೈಗೆ ನೂಲುವ ಚಕ್ರವನ್ನು ಹಾಗೂ ಕೈಮಗ್ಗವನ್ನು ಕೊಡುತ್ತಾರೆ.

ಗಾಂಧಿವಾದಕ್ಕೆ ಎರಡು ಮುಖಗಳಿವೆ. ಅದರಲ್ಲಿ ಮೊದಲನೆಯದು ಮಾನವ ಸಮಾಜಕ್ಕೆ ಸಾರ್ವತ್ರಿಕವಾಗಿರುವ ಸಾಮಾನ್ಯ ಕೆಡುಕುಗಳಿಗೆ ಸಂಬಂಧಿಸಿದ್ದಾಗಿದ್ದು, ಎಲ್ಲರನ್ನೂ ಕಾಡುವ ಅವುಗಳ ಪರಿಹಾರವನ್ನು ಕುರಿತಾದದ್ದು. ಇನ್ನೊಂದು ನಿರಂಕುಶಾಧಿಕಾರವೆಂಬ ವಿಶಿಷ್ಟವಾದ ಕೆಡುಕನ್ನು ಕುರಿತಾಗಿದ್ದು, ಅದನ್ನು ನಿವಾರಿಸುವ ವಿಧಾನಗಳ ಬಗ್ಗೆ ಪ್ರತಿಪಾದಿಸುತ್ತದೆ. ನಾವು ಮೊದಲನೆಯದರ ಬಗ್ಗೆ ಚರ್ಚಿಸಿದ್ದೇವೆ. ಈಗ ಎರಡನೆಯದರ ಬಗ್ಗೆಯೂ ಕೊಂಚ ಚರ್ಚಿಸೋಣ.

ಯಾವುದೇ ಒಂದು ದೇಶವು ನಿರಂಕುಶಾಧಿಕಾರಕ್ಕೆ ತುತ್ತಾಗಿದ್ದರೆ, ಅದು ವಿದೇಶೀಯವಾಗಿರಲಿ ಅಥವಾ ದೇಶೀಯವಾಗಿರಲಿ ಅದನ್ನು ಕಿತ್ತು ಹಾಕುವ ಬಗೆ ಯಾವುದು? ಖಂಡಿತವಾಗಿಯೂ ಅದು ಸಾಧ್ಯವೊ ಅಸಾಧ್ಯವೋ, ಸೇನಾ ಯುದ್ಧದ ಮೂಲಕ ಅಲ್ಲ. ಗಾಂಧಿವಾದವು ತನ್ನ ಅಹಿಂಸಾತ್ಮಕ, ಅಸಹಕಾರ ಯೋಜನೆಯನ್ನು ಮುಂದಿಟ್ಟಿದೆ. ಈ ಯೋಜನೆಯು ರಷ್ಯನ್ನರಿಗೆ ಟಾಲ್ಸ್‌ಟಾಯ್ ಅವರು ಮುಂದಿಟ್ಟ, ಅಹಿಂಸಾತ್ಮಕವಾದ, ಸರ್ಕಾರದೊಂದಿಗೆ ಭಾಗವಹಿಸದೆ ಹೊರಗುಳಿಯುವ ಯೋಜನೆಯಿಂದ ನೇರವಾಗಿ ಸ್ಫೂರ್ತಿ ಹೊಂದಿರುವಂಥದ್ದು. ಟಾಲ್ಸ್‌ಟಾಯ್ ಅವರ ಯೋಜನೆಯನ್ನು ರಷ್ಯನ್ನರು ಕೈಬಿಟ್ಟರು. ಭಾರತವು ಗಾಂಧಿಯವರ ಯೋಜನೆಯನ್ನು ಅಳವಡಿಸಿಕೊಂಡಿದೆ. ಗಾಂಧಿಯವರ ಯೋಜನೆಯನ್ನು ಮುಂದಿಡುವ ಬದಲು ಟಾಲ್ಸ್‌ಟಾಯ್ ಅವರ ಯೋಜನೆಯನ್ನು ಮುಂದಿಡುತ್ತೇವೆ ಎಂದುಕೊಳ್ಳೋಣ. ಆಗ ಕಲ್ಕತ್ತಾದಲ್ಲಿ ನಡೆದ ಕಾಂಗ್ರೆಸ್

ಅಧಿವೇಶನವನ್ನು ನಡೆಸಿಕೊಂಡು ಹೋಗಿದ್ದು ಟಾಲ್ಸ್‌ಟಾಯ್ ಎಂಬುದನ್ನು ನಾವು ಕಾಣುತ್ತೇವೆ. ಆ ಅಧಿವೇಶನದಲ್ಲಿಯೇ ಗಾಂಧಿಯವರ ಯೋಜನೆಯ ಮೊದಲ ತತ್ವಗಳನ್ನು ರೂಪಿಸಿದ್ದು ಮತ್ತು ಗಾಂಧಿಯವರೇ ಟಾಲ್ಸ್‌ಟಾಯ್ ಅವರ ಪ್ರತಿನಿಧಿಯಾಗಿದ್ದರು! ರಷ್ಯಾದಿಂದ ಹೊರಗೆ ತಳ್ಳಲ್ಪಟ್ಟ ಟಾಲ್ಸ್‌ಟಾಯ್ ಈಗ ನಮ್ಮ ನಡುವೆ ಇದ್ದಾರೆ.

ಈ ಯೋಜನೆಯಲ್ಲಿ ಅಂತರ್ಗತವಾಗಿರುವ ಪರಿಕಲ್ಪನೆ ಏನೆಂದರೆ ನಿರಂಕುಶಾಧಿಕಾರಿಗಳು ಭೀತಿಯ ಮೂಲಕ ಅಧಿಕಾರವನ್ನು ನಡೆಸಲು ಸಾಧ್ಯವಾಗುವುದು ಏಕೆಂದರೆ, ಅದರಲ್ಲಿ ಭಾಗವಹಿಸುವರು ಭಯಕ್ಕೆ ತುತ್ತಾದ ಗುಲಾಮರು. ಟಾಲ್ಸ್‌ಟಾಯ್ ಅವರು ಅಹಿಂಸಾತ್ಮಕ ಅಸಹಕಾರವನ್ನು ಅನುಸರಿಸುವ ಕಾರ್ಯಕರ್ತನಿಗೆ ಸಮಗ್ರವಾದ ಮೂರು ಅನುಶಾಸನಗಳನ್ನು ವಿಧಿಸುತ್ತಾರೆ.

"ಆತನು ಮೊಟ್ಟ ಮೊದಲನೆಯದಾಗಿ ತನ್ನ ಸ್ವ-ಇಚ್ಚೆಯಿಂದಾಗಲಿ ಅಥವಾ ಬಲಾತ್ಕಾರಕ್ಕೆ ಒಳಪಟ್ಟಾಗಲಿ ಸರ್ಕಾರಿ ಚಟುವಟಿಕೆಯಲ್ಲಿ ಯಾವುದೇ ರೀತಿಯಲ್ಲಿ ಭಾಗಿಯಾಗಬಾರದು ಮತ್ತು ಆತನು ಸೈನಿಕನಾಗಿರಬಾರದು, ಸೇನಾಧಿಪತಿ ಆಗಿರಬಾರದು, ಪ್ರಭುತ್ವದಲ್ಲಿ ಸಚಿವನಾಗಿರಬಾರದು, ಕಂದಾಯ ಸಂಗ್ರಾಹಕನಾಗಬಾರದು, ಸಾಕ್ಷಿಯಾಗಿರಬಾರದು, ನಗರ ಸಭೆಯ ಅಧಿಕಾರಿ ಅಥವಾ ಜ್ಯೂರಿ ಆಗಿರಬಾರದು, ರಾಜ್ಯಪಾಲನಾಗಿರಬಾರದು, ಸಂಸತ್ ಸದಸ್ಯನಾಗಿರಬಾರದು ಮತ್ತು ಯಾವುದೇ ಹಿಂಸೆಯಲ್ಲಿ ತೊಡಗುವಂತಹ ಹುದ್ದೆಯನ್ನು ಹೊಂದಿರಬಾರದು. ಇದು ಮೊದಲನೆಯ ಅಂಶ".

"ಎರಡನೆಯದಾಗಿ ಅಂತಹ ವ್ಯಕ್ತಿಯು ಸ್ವಂತ ಇಚ್ಚೆಯಿಂದ ಸರ್ಕಾರಕ್ಕೆ ನೇರವಾಗಿ ಆಗಲೀ ಪರೋಕ್ಷವಾಗಿ ಆಗಲೀ ಕಂದಾಯವನ್ನು ಕಟ್ಟಬಾರದು ಅಥವಾ ಸಂಬಳವಾಗಿ, ಪಿಂಚಣಿಯಾಗಿ ಅಥವಾ ಬಹುಮಾನದ ರೂಪದಲ್ಲಿ ಕಂದಾಯ ಸಂಗ್ರಹದಿಂದ ಬಂದ ಹಣವನ್ನು ಸ್ವೀಕರಿಸಬಾರದು ಮತ್ತು ಜನರಿಂದ ಹಿಂಸಾತ್ಮಕವಾಗಿ ಸಂಗ್ರಹಿಸಿದ ಕಂದಾಯದಿಂದ ಬೆಂಬಲಿತವಾದ ಯಾವುದೇ ಸರ್ಕಾರಿ ಸಂಸ್ಥೆಯನ್ನು ಬಳಸಿಕೊಳ್ಳಬಾರದು".

"ಮೂರನೆಯದಾಗಿ ಆ ವ್ಯಕ್ತಿಯು ತನ್ನ ಹಿತವನ್ನು ಮಾತ್ರ ಮುನ್ನಡೆಸುವ ಯಾವುದೇ ಆಕಾಂಕ್ಷೆಯನ್ನು ಹೊಂದಿರಬಾರದು, ಬದಲಿಗೆ ಎಲ್ಲ ಜನರ ಸ್ಥಾನಮಾನವನ್ನು ಉತ್ತಮಪಡಿಸಲೆತ್ನಿಸಬೇಕು. ತನ್ನ ವಶದಲ್ಲಿರುವ ಭೂಮಿಯನ್ನು, ಇತರ ಸಂಪತ್ತನ್ನು ಅಥವಾ ತನ್ನನ್ನು ಅಥವಾ ತನ್ನ ಆಪ್ತರನ್ನು ರಕ್ಷಿಸಿಕೊಳ್ಳಲು ಸರ್ಕಾರದ, ಹಿಂಸೆಯಿಂದ ಕೂಡಿದ ನೆರವನ್ನು ಕೇಳಿಕೊಳ್ಳಬಾರದು. ಬದಲಿಗೆ ತನ್ನದೇ ಆದ ಭೂಮಿಯನ್ನು ಅಥವಾ ಉತ್ಪಾದನೆಯನ್ನು ಅಥವಾ ಇತರರ ಉತ್ಪಾದನೆಯನ್ನು ತಾನು ಹೊಂದಬೇಕೆಂದರೆ ಆಗ ಅದರ ಮೇಲೆ ಬೇರೆ ಯಾರೂ ಹಕ್ಕನ್ನು ಸ್ಥಾಪನೆ ಮಾಡದೆ ಇದ್ದಲ್ಲಿ ಮಾತ್ರ ತಾನು ಹೊಂದಬಹುದು".

ಟಾಲ್ಸ್‌ಟಾಯ್ ಅವರು ನಮ್ಮಲ್ಲಿನ ಮಂದಗಾಮಿಗಳ ಅಭಿಪ್ರಾಯವನ್ನು ನಿರೀಕ್ಷಿಸಿದ್ದರು ಎನಿಸುತ್ತದೆ, ಆದ್ದರಿಂದ ಅವರು ಮುಂದುವರೆದು ಹೇಳುತ್ತಾರೆ: "ಆದರೆ ಅಂತಹ ಚಟುವಟಿಕೆ ಸಾಧ್ಯವಿಲ್ಲ, ಸರ್ಕಾರದ ವ್ಯವಹಾರಗಳಲ್ಲಿ ಯಾವುದೇ ರೀತಿಯಲ್ಲಿ ಭಾಗವಹಿಸುವುದಿಲ್ಲ ಎಂದರೆ ಅದು ಬದುಕುವುದನ್ನೇ ನಿರಾಕರಿಸಿದಂತೆ" ಎಂದು ಜನರು ಅನ್ನಬಹುದು. ಕಂದಾಯಗಳನ್ನು ಕಟ್ಟುವುದಿಲ್ಲ ಎಂದವನು ಶಿಕ್ಷೆಗೆ ಒಳಗಾಗುತ್ತಾನೆ ಮತ್ತು ಅವನ ಆಸ್ತಿಯಿಂದ ಕಂದಾಯವನ್ನು ಪಡೆದುಕೊಳ್ಳಲಾಗುತ್ತದೆ; ಯಾವ ಮನುಷ್ಯನು ಬದುಕಲು ಜೀವನೋಪಾಯ ಇಲ್ಲದಿದ್ದರೂ ಸರ್ಕಾರಿ ಸೇವೆಯನ್ನು ನಿರಾಕರಿಸುತ್ತಾನೋ ಅವನು ತನ್ನ ಕುಟುಂಬದೊಂದಿಗೆ ಹಸಿವಿನಿಂದ ಸಾಯಬೇಕಾಗುತ್ತದೆ. ತನ್ನ ಆಸ್ತಿ ಮತ್ತು ಶರೀರವನ್ನು ರಕ್ಷಿಸಿಕೊಳ್ಳಲು ಸರ್ಕಾರದ ರಕ್ಷಣೆಯನ್ನು ತಿರಸ್ಕರಿಸುವವನ ಸ್ಥಿತಿ ಕೂಡ ಹಾಗೆಯೇ ಆಗುತ್ತದೆ; ಸರ್ಕಾರವು ಕಂದಾಯವನ್ನು ಹಾಕುವಂತಹ ವಸ್ತುಗಳನ್ನು ಅಥವಾ ಸರ್ಕಾರಿ ಸಂಸ್ಥೆಗಳನ್ನು ಬಳಸುವುದಿಲ್ಲ ಎಂಬುದು ಅಸಾಧ್ಯದ ಮಾತಾಗುತ್ತದೆ,

ಏಕೆಂದರೆ ಅತ್ಯಂತ ಅವಶ್ಯಕ ವಸ್ತುಗಳು ತೆರಿಗೆಗೆ ಒಳಪಟ್ಟಿರುತ್ತವೆ ಮತ್ತು ಅದೇ ರೀತಿಯಲ್ಲಿ ಅಂಚೆ, ರಸ್ತೆ ಮುಂತಾದ ಸರ್ಕಾರಿ ಸಂಸ್ಥೆಗಳನ್ನು ಉಪಯೋಗಿಸದೆ ಇರುವುದು ಸಾಧ್ಯವೇ ಇಲ್ಲ".

ಆದರೆ ಇದಕ್ಕೆ ತಣ್ಣನೆಯ ಮತ್ತು ಚಿಂತನ ಪೂರ್ಣವಾದ ಉತ್ತರವನ್ನು ಅವರು ನೀಡುತ್ತಾರೆ. "ಎಲ್ಲರಿಗೂ ಒಮ್ಮೆಲೆ ಇದನ್ನು ಮಾಡುವುದು ಸಾಧ್ಯವಾಗುವುದಿಲ್ಲ. ಆದರೆ ಯಾವಾಗ ಜನರು ಈ ವಿಷಯಗಳ ಬಗ್ಗೆ ಪ್ರಜ್ಞಾವಂತರಾಗುತ್ತಾರೋ ಆಗ ಅವರು ಆಚರಣೆಯಲ್ಲಿ ತರಲು ತೊಡಗಲಾರಂಭಿಸುತ್ತಾರೆ" (ಟಾಲ್‌ಸ್ಟಾಯ್; ದಿ ಸ್ಲೇವರಿ ಆಫ್ ಅವರ್ ಟೈಮ್ಸ್).

ಇಲ್ಲಿಯವರೆಗೂ ನಡೆದ ಚರ್ಚೆಯಿಂದ ಸ್ಪಷ್ಟವಾಗುವುದೇನೆಂದರೆ, ಗಾಂಧಿವಾದವು ವೈಯಕ್ತಿಕ ಶುದ್ಧೀಕರಣದ ಮೇಲೆ, ವೈಯಕ್ತಿಕ ಪ್ರಜ್ಞಾವಂತಿಕೆಯ ಮೇಲೆ, ಗಾಢ ವಿಶ್ವಾಸದ ಮೇಲೆ ಮತ್ತು ವ್ಯಕ್ತಿಯ ನಡೆಯ ಮೇಲೆ ಅವಲಂಬಿತವಾಗಿದೆ. ಗಾಂಧಿವಾದವು ಪ್ರತಿಯೊಬ್ಬರೂ ತಮ್ಮ ಪ್ರಜ್ಞೆಯನ್ನು ಅನುಸರಿಸಿ ಕೆಲಸ ಮಾಡುವ ಅವಶ್ಯಕತೆಗೆ ಒತ್ತು ಕೊಡುತ್ತದೆ. ಗಾಂಧಿವಾದವು ಮನುಷ್ಯ ಸ್ವಭಾವದಲ್ಲಿನ ಅಂತರ್ಗತ ಒಳ್ಳೆಯತನದ ಬಗ್ಗೆ ಮೇರೆ ಇಲ್ಲದ ವಿಶ್ವಾಸವನ್ನು ಹೊಂದಿದೆ ಮತ್ತು ಮನುಷ್ಯನನ್ನು ಅವನ ಆತ್ಮಸಾಕ್ಷಿಗೆ ಅನುಗುಣವಾಗಿ ಕೆಲಸ ಮಾಡಲು ಬಿಟ್ಟರೆ ಅದು ಮನುಷ್ಯನ ಮತ್ತು ಆತನ ಸಮುದಾಯದ ಒಳಿತಿಗಾಗಿಯೇ ಕೆಲಸ ಮಾಡುತ್ತದೆ ಎಂದು ನಂಬುತ್ತದೆ. ಗಾಂಧಿವಾದದ ವಿಸ್ತಾರವಾದ ಚಿಂತನಾ ಪದ್ಧತಿಯಲ್ಲಿ ಯಾವುದೇ ರೀತಿಯ ಬಲಾತ್ಕಾರಕ್ಕೆ ಅವಕಾಶವಿಲ್ಲ ಮತ್ತು ಮನುಷ್ಯನ ನಡೆಗೆ ಸಂಪೂರ್ಣ ಸ್ವಾತಂತ್ರವಿದೆ. ಸರ್ಕಾರದ ನಿಯಂತ್ರಣಕ್ಕೆ , ಬಲಾತ್ಕಾರಕ್ಕೆ ಅತಿ ಕಡಿಮೆ ಅವಕಾಶವಿರಬೇಕು, ಆಗ ಅತಿ ಹೆಚ್ಚು ವ್ಯಕ್ತಿ ಸ್ವಾತಂತ್ರವಿರುತ್ತದೆ ಎಂಬ ಇಂಗ್ಲೀಷರ ಪರಿಕಲ್ಪನೆ ಯೊಂದಿಗೆ ಇದು ಹೊಂದುತ್ತದೆ (ನೋಡಿ; ಸೀಲಿ ಅವರ ಇಂಟ್ರೊಡಕ್ಷನ್ ಟು ಪೊಲಿಟಿಕಲ್ ಸೈನ್ಸ್, ಹೆಗಲ್ ಅವರ ಫಿಲಾಸಫಿ ಆಫ್ ಹಿಸ್ಟರಿ). ಇನ್ನೊಂದು ಕಡೆ ಬೋಲ್ಶೆವಿಸಮ್ ಸಿದ್ಧಾಂತವು ಮನುಷ್ಯನ ಸ್ವಭಾವದಲ್ಲಿನ ಅಂತರ್ಗತ ಒಳ್ಳೆಯತನವನ್ನು ನಂಬುವುದಿಲ್ಲ. ಬದಲಿಗೆ ಅದು ಅತಿ ಹೆಚ್ಚು ಬಲಾತ್ಕಾರ ಅಥವಾ ನಿಯಂತ್ರಣವನ್ನು ಪ್ರತಿಪಾದಿಸುತ್ತಾ (ಆದರೆ ಅದು ಅಲ್ಪ ಕಾಲಾವಧಿಯದ್ದು ಎಂದೂ ಹೇಳುತ್ತದೆ) ಅದರ ಮೂಲಕ ಇಡೀ ಸಮುದಾಯದ ಸಮಾನ ಒಳಿತಿನ ಕುರಿತು ಮಾನವನಿಗೆ ಇರುವ ಕರ್ತವ್ಯವನ್ನು ಬೋಧಿಸಬೇಕು ಎನ್ನುತ್ತದೆ. ಮನುಷ್ಯ ಮತ್ತು ಮನುಷ್ಯನ ನಡುವೆ ಹಾಗೂ ಮನುಷ್ಯ ಮತ್ತು ಜೀವ ಜಗತ್ತಿನ ನಡುವೆ ಶಾಂತಿಯನ್ನು ಹಾಗೂ ಸಾರ್ವತ್ರಿಕ ಶಾಂತಿ (ಅಹಿಂಸೆ)ಯ ಆಧಾರದ ಮೇಲೆ ರಾಷ್ಟ್ರೀಯತೆಯನ್ನು ಕಟ್ಟುತ್ತಾ ಅಂತಹ ಒಂದು ಭಾರತೀಯ ಸಾಮ್ರಾಜ್ಯವನ್ನು ಜಗತ್ತಿಗೆ ಉಡುಗೊರೆಯಾಗಿ ಕೊಡಬೇಕು ಎಂದು ಗಾಂಧಿವಾದವು ಆಶಿಸುತ್ತದೆ. ಇದೊಂದು ನ್ಯಾಯ ಪರವಾದ ಕನಸು, ಒಂದು ಪ್ರಾಮಾಣಿಕ ಆದರ್ಶ. ಆದರೆ ಕಾರ್ಯಸಾಧುತ್ವಕ್ಕೆ, ವಾಸ್ತವಿಕತೆಗೆ ಒತ್ತು ನೀಡುವ ಲೆನಿನ್ ಅವರು, ತೋಳದಂತಹ ಹಸಿವಿನ ಬಂಡವಾಳಶಾಹಿ ಮಿಲಿಟರಿ ಪ್ರಭುತ್ವಗಳ ಜಾಗತಿಕ ಒಕ್ಕೂಟವೊಂದು ಬಡವರ ಮತ್ತು ಬಡ ರಾಷ್ಟ್ರಗಳ ಶಾಂತಿಯನ್ನು ಭಗ್ನಗೊಳಿಸಲು ಸದಾ ಸಿದ್ಧವಿರುವುದನ್ನು, ಸ್ವಾತಂತ್ರ್ಯವನ್ನು ಅದರ ಶೈಶವಾವಸ್ಥೆಯಲ್ಲಿಯೇ ಅದು ಯಾವುದೇ ಸ್ವರೂಪದಲ್ಲಿ ಇದ್ದರೂ ಅದನ್ನು ಕತ್ತರಿಸಿ ಹಾಕಲು ಸಿದ್ಧವಿರುವುದನ್ನು ತಮ್ಮ ಮುನ್ನೋಟದಲ್ಲಿ ಕಾಣುತ್ತಾ ನಿಧಾನವಾಗಿ ಪಿಸುಗುಟ್ಟುತ್ತಾರೆ, "ಒಂದಾನೊಂದು ಕಾಲದಲ್ಲಿ ಮಹಾನ್ ಅಶೋಕನು ಒಂದು ಸಾಮ್ರಾಜ್ಯವನ್ನು ಕಟ್ಟಿದನು ಮತ್ತು ಅದನ್ನು ಅಹಿಂಸೆಯ ತತ್ವಗಳಿಗೆ ಅನುಗುಣವಾಗಿ ಆಳಬೇಕೆಂದು ಪ್ರಯತ್ನಿಸಿದನು (ನೋಡಿ: ಅಶೋಕನ ಶಾಸನಗಳು). ಆದರಿಂದು ಅಹಿಂಸೆಯ ನೇಯ್ಗೆ ಎಲ್ಲಿದೆ? ಅಯ್ಯೋ! ಅದು ಚಾರಿತ್ರಿಕ ಶಕ್ತಿಗಳ ಸಂಘರ್ಷದಲ್ಲಿ, ಅವು ನೀಡುವ ಆಘಾತದಲ್ಲಿ ನಿರ್ದಯವಾಗಿ ಮುರಿದು ಚೂರಾಗಿದೆ. ಚರಿತ್ರೆಯ ಮುಖ್ಯ ಸೃಷ್ಟಿಕರ್ತನು ಈ ಜಗತ್ತು ಪಶುವಿನ ಹಂತದಿಂದ ಮಾನವನ ಹಂತಕ್ಕೆ ಒಂದು ವೇದನಾದಾಯಕ ಚಾರಿತ್ರಿಕ ಬೆಳವಣಿಗೆಯ ಪ್ರಕ್ರಿಯೆಯ ಮೂಲಕ ಹಾದು ಹೋಗಬೇಕೆಂದು ಆಜ್ಞೆ ಮಾಡಿದ್ದಾನೇನೋ ಎನಿಸುತ್ತದೆ. ನೀವು ಈ ಜಗತ್ತಿನ ದೊಡ್ಡ ರಾಷ್ಟ್ರಗಳು ತಮ್ಮ ಅಹಂಕಾರವನ್ನು, ದ್ವೇಷವನ್ನು, ತಮ್ಮ

ರಾಜಲಾಂಛನಗಳನ್ನು, ಕತ್ತಿಗಳನ್ನು ಪಕ್ಕಕ್ಕಿಡಲಿ ಮತ್ತು ಪಶ್ಚಾತಾಪದ ವಿನಯದೊಂದಿಗೆ, ಪ್ರೀತಿ ಮತ್ತು ತ್ಯಾಗದೊಂದಿಗೆ ಒಂದಾಗಿ ಜಗತ್ತನ್ನು ಬರ್ಬರಗೊಳಿಸಲು ಯತ್ನಿಸುತ್ತಿರುವ ಶಕ್ತಿಗಳ ವಿರುದ್ಧ ಹೋರಾಡಲಿ ಎಂದು ಕೇಳಿಕೊಳ್ಳಿ. ಅವರು ನಿಮ್ಮನ್ನು ನೋಡಿ ನಕ್ಕಾರು! ಅವರ ನಗುವಿಗೆ ಪ್ರತಿಯಾಗಿ ಅವರೇ ಸೃಷ್ಟಿಸಿರುವ ಉಪಕರಣಗಳೊಂದಿಗೆ, ಕತ್ತಿಯೊಂದಿಗೆ ನೀವು ಪ್ರತಿಯಾಗಿ ಉತ್ತರಿಸಿ. ಆಗ ನಿಮಗೆ ಶಾಂತಿ ದೊರಕುತ್ತದೆ. ಇಲ್ಲದಿದ್ದರೆ ನೀವು ಅವರ ಮಹತ್ವಾಕಾಂಕ್ಷೆಗೆ ಬಲಿಯಾಗುತ್ತೀರಿ. ನಿಜವಾಗಿಯೂ ನಮ್ಮೆದುರು ಒಂದು ವೇದನಾದಾಯಕವಾದ ನಿಗೂಢವಾದ ಭವಿಷ್ಯವಿದೆ. ಆದರೆ ಮತ್ತೊಮ್ಮೆ ಬುದ್ಧನ ನಾಡು ಬುದ್ಧ ಚಿಂತನೆಯನ್ನು ಅಥವಾ ಗಾಂಧಿವಾದವನ್ನು ಅನುಸರಿಸುವುದಕ್ಕೆ ನಿರ್ಣಯಿಸಿದಂತಿದೆ. ಮತ್ತೊಮ್ಮೆ ಈ ನೇಯ್ಗೆಯು ಛಿದ್ರವಾಗದಿರಲಿ!!

**ನೆನಪಿಡಬೇಕಾದ ಮುಖ್ಯಾಂಶಗಳು**

ಗಾಂಧಿ ಮತ್ತು ಲೆನಿನ್

ಸಮಾನವಾದ ಧ್ಯೇಯ: ಪ್ರಸಕ್ತ ಸಮಾಜದಲ್ಲಿರುವ ಸಾಮಾಜಿಕ ಕೆಡುಕುಗಳನ್ನು ಕೊನೆಗಾಣಿಸುವುದು, ವಿಶೇಷವಾಗಿ ಬಡವರ ಸಂಕಟವನ್ನು ದೂರ ಮಾಡುವುದು ಹಾಗೂ ನಿರಂಕುಶಾಧಿಕಾರವನ್ನು ಕಿತ್ತೆಸೆಯುವುದು.

ನೆಲೆಗಳು

| ಗಾಂಧಿ | ಲೆನಿನ್ |
|---|---|
| ಕಾರಣ: ಆಧುನಿಕ ನಾಗರಿಕತೆ, ವಿಶೇಷವಾಗಿ ಆಧುನಿಕ ಕೈಗಾರಿಕೀಕರಣ ಉತ್ಪಾದನಾ ಮತ್ತು ತತ್ಫಲವಾದ ಮಾನವತೆಯ ಕೆಡಕುಗಳು | ಕಾರಣ: ಬಂಡವಾಳಗಾರರು ಭೂಮಿ ಮುಂತಾದ ಸಾಧನಗಳನ್ನು ಕೈವಶ ಮಾಡಿಕೊಂಡಿರುವುದು ಸಂಪತ್ತಿನಲ್ಲಿ ಅಸಮಾನತೆ ಮತ್ತು ತತ್ಫಲವಾಗಿ ಮಾನವತೆಯ ಬಹುಭಾಗವಾಗಿರುವ ಶ್ರಮಜೀವಿಗಳ ಕಡುಬಡತನ. |

ಪರಿಹಾರ

| | |
|---|---|
| ಆಧುನಿಕ ನಾಗರಿಕತೆ ಮತ್ತು ಯಾಂತ್ರಿಕೀಕರಣದ ಮೂಲ ಪ್ರೇರಣೆಯನ್ನು ಕೊನೆಗಾಣಿಸುವುದು. | ಆಧುನಿಕತೆಯ ಗಳಿಕೆಗಳನ್ನು ಉಳಿಸಿಕೊಳ್ಳುವುದು. ಆದರೆ ಅವುಗಳು ಸಾಮಾನ್ಯ ಒಳಿತಿಗೆ ದುಡಿಯುವಂತೆ ಮಾಡುವುದು. ಎಂದರೆ ಈಗ ಶ್ರೀಮಂತರಿಗೆ ಹೋಗುತ್ತಿರುವ ಮಿಗುತಾಯ ಮೌಲ್ಯವನ್ನು ಉಪಯೋಗಿಸಿಕೊಳ್ಳಲು ಉತ್ಪಾದನಾ ಸಾಧನಗಳನ್ನು ರಾಷ್ಟ್ರೀಕರಿಸುವುದು. |

**ಕ್ರಮಗಳು**

| ಗಾಂಧಿ | ಲೆನಿನ್ |
|---|---|
| 1. ಬಂಡವಾಳದ ಮತ್ತು ಎಲ್ಲ ರೀತಿಯ ನಿರಂಕುಶವಾದವನ್ನು ಕೊನೆಗಾಣಿಸಬೇಕು | 1. ಬಂಡವಾಳದ ಮತ್ತು ಎಲ್ಲ ರೀತಿಯ ನಿರಂಕುಶಾಧಿಕಾರವು ತೊಲಗಲೇಬೇಕು. |
| 2. ನಿರಂಕುಶಾಧಿಕಾರವು ಬಲಪ್ರಯೋಗದ ಮೇಲೆ ನಿಂತಿದೆ | 2. ನಿರಂಕುಶಾಧಿಕಾರವು ಬಲಪ್ರಯೋಗದ ಮೇಲೆ ನಿಂತಿರುತ್ತದೆ. |
| 3. ಬಲಪ್ರಯೋಗವು ಸಾಧ್ಯವಾಗುವುದು ಏಕೆಂದರೆ ಭೀತಿಗೆ ಒಳಗಾದವರು ಸೈನ್ಯದ ಕೆಲಸ ಕಾರ್ಯಗಳಲ್ಲಿ ಭಾಗವಹಿಸುತ್ತಾರೆ ಅಥವಾ ಸಹಕರಿಸುತ್ತಾರೆ ಮತ್ತು ಅದೇ ರೀತಿಯಲ್ಲಿ ನಿರಂಕುಶಾಧಿಕಾರಿಗಳ ಕಂದಾಯ ಸಂಗ್ರಹ ಮತ್ತು ಕಾನೂನುಗಳನ್ನು ಒಪ್ಪಿಕೊಂಡಿರುತ್ತಾರೆ. | 3. ಜವಾಬ್ದಾರಿ ನಿರ್ವಹಿಸುವುದರಲ್ಲಿ ಭಾಗವಹಿಸುವಿಕೆಯು ಸ್ವ ಇಚ್ಛೆಯಿಂದ ನಡೆಯುವಂತಹದ್ದಲ್ಲ. ಮೊದಲಿಗೆ ಬಲಪ್ರಯೋಗದ ಕಾರಣದಿಂದ ನಡೆಯುವಂತದ್ದು ಮತ್ತು ಅದು ಭೀತಿಗೊಳಗಾದ ಜನರಿಂದ ಆಗುವಂಥದ್ದಲ್ಲ. |
| 4. ಎಲ್ಲರೂ ಅಸಹಕಾರ ತೋರಿದರೆ ಸಮಾಜದಲ್ಲಿನ ಮೇಲ್ ರಚನೆಗಳು ಕುಸಿದು ಬೀಳುತ್ತವೆ | 4. ಎಲ್ಲರೂ ಅಸಹಕಾರದಲ್ಲಿ ಭಾಗವಹಿಸುವುದು ಸಾಧ್ಯವಿಲ್ಲ ಏಕೆಂದರೆ ಬಹುಸಂಖ್ಯಾತರ ಹಿತಾಸಕ್ತಿಗಳು ದಬ್ಬಾಳಿಕೆಯ ಶಕ್ತಿಯೊಂದಿಗೆ ಹೊಂದಿಕೊಂಡಿರುತ್ತವೆ. ಅಲ್ಪಸಂಖ್ಯಾತರೇ ವ್ಯವಸ್ಥೆಯನ್ನು ಬುಡಮೇಲು ಮಾಡುತ್ತಾರೆ ಮತ್ತು ಬಹುಸಂಖ್ಯಾತರು ಅದನ್ನು ಅನುಸರಿಸುತ್ತಾರೆ. |
| 5. ಕೇವಲ ಧರ್ಮ ಮತ್ತು ಅಹಿಂಸೆಗಳು ಇದನ್ನು ಸಾಧಿಸುವುದಕ್ಕೆ ಸಾಧ್ಯ. ಮತ ಧರ್ಮವು ಆಧುನಿಕ ಸಾಧನಗಳು ಎಷ್ಟು ಟೊಳ್ಳು ಎಂಬುದನ್ನು ಬೋಧಿಸುತ್ತದೆ. ಹಿಂಸೆಯು ಪ್ರತಿ ಹಿಂಸೆಗೆ ಕಾರಣವಾಗುತ್ತದೆ. ಅಹಿಂಸೆಯು ಅಹಿಂಸೆಗೆ ಕಾರಣವಾಗುತ್ತದೆ. ಮತ್ತು ಸಮಾಜದಲ್ಲಿ ಅಲ್ಲೋಲಕಲ್ಲೋಲವಾಗುವುದನ್ನು ತಪ್ಪಿಸಿದಂತಾಗುತ್ತದೆ. ಚರಿತ್ರೆಯಲ್ಲಿನ ಕ್ರಾಂತಿಗಳು ತೋರಿಸಿಕೊಟ್ಟಿರುವಂತೆ ನಿರಂಕುಶಾಧಿಕಾರವನ್ನು ಕಿತ್ತೆಸೆದಾಗ ಅರಾಜಕತೆ ಉಂಟಾಗುತ್ತದೆ. | 5. ದಬ್ಬಾಳಿಕೆಯು ಮತ ಧರ್ಮ ಅಹಿಂಸೆ ಮತ್ತು ಅಂತಹ ಮಾನವ ಪ್ರೇರಣೆಗಳಿಂದ ಕಿತ್ತುಹಾಕಲ್ಪಡುವುದಿಲ್ಲ. ದಬ್ಬಾಳಿಕೆ ನಡೆಸುವ ಶಕ್ತಿಯು ವಿಮೋಚಕರ ಇಡಿಯ ಸಮುದಾಯವನ್ನೇ ನಾಶ ಮಾಡಿಬಿಡುತ್ತದೆ. ಆದ್ದರಿಂದ ಅದು ಉಪಯೋಗಿಸುವಂತಹ ಬಲಾತ್ಕಾರದ ವಿಧಾನಗಳಿಂದಲೇ ಅದನ್ನು ತೊಲಗಿಸಬೇಕು ಹಾಗೂ ತುಳಿಯಬೇಕು. ಅವರನ್ನು ಅಧಿಕಾರದಿಂದ ಕೆಳಗಿಳಿಸಿದ ಮೇಲೆ ಬರುವಂತಹ ಅರಾಜಕತೆಯು ತಾತ್ಕಾಲಿಕವಾದದ್ದು ಮತ್ತು ಅರಾಜಕತೆಯಿಂದ ತೊಂದರೆಗೀಡಾದ ಜನತೆಯು |

| | |
|---|---|
| | ಚರಿತ್ರೆಯು ಈಗಾಗಲೇ ತೋರಿಸಿರುವಂತೆ ಮತ್ತೆ ವ್ಯವಸ್ಥೆಯೊಂದನ್ನು ರಚಿಸಿಕೊಳ್ಳುತ್ತಾರೆ. |
| 6. ಅಹಿಂಸೆ ಮತ್ತು ಮತ ಧರ್ಮದ ಪ್ರಯತ್ನದಿಂದಾಗಿ ನಿರಂಕುಶಾಧಿಕಾರವು ಕೆಳಗುರುಳಿದಾಗ ಅದರ ಫಲವಾಗಿ ಸಮಾಜದಲ್ಲಿ ಒಂದು ಧಾರ್ಮಿಕ ಪದ್ಧತಿಯು ನೆಲೆಯೂರುತ್ತದೆ. ಮತ ಧರ್ಮದ ಪ್ರಜ್ಞೆಯು ಆಧುನಿಕತೆಯ ಟೊಳ್ಳುತನದ ಅರಿವನ್ನು ಹೊಂದಿದ್ದು ಎಲ್ಲರ ಒಳಿತಿಗಾಗಿ ಅದನ್ನು ನಾಶಗೊಳಿಸುತ್ತದೆ. ಆಗ ಅಲ್ಲಿ ಮೂಡಿ ಬರುವ ಕಾನೂನು ಎಂದರೆ ಮನುಷ್ಯನ ಹಾಗೂ ಮಾನವತೆಯ ಆತ್ಮಸಾಕ್ಷಿಯ ಕಾನೂನು. ಆತ್ಮಸಾಕ್ಷಿಯು ತನ್ನ ಸಹಜ ಸ್ವಭಾವದಿಂದಾಗಿ ಸಾಮಾಜಿಕ ಒಳಿತಿಗಾಗಿ ಕೆಲಸ ಮಾಡುತ್ತದೆ. ಅಂತಹ ಸಮಾಜದಲ್ಲಿ ಬಂಡವಾಳ, ಶ್ರಮ ಮತ್ತು ವರ್ಗ ಸಮರಗಳ ಕೆಡಕುಗಳು ಕಾಣದಾಗುತ್ತವೆ. ಆದ್ದರಿಂದ ಮನುಷ್ಯರನ್ನು ಶುದ್ಧೀಕರಿಸಿ. | 6. ಆತ್ಮಸಾಕ್ಷಿಯ ಒತ್ತಾಯಗಳನ್ನು, ಅವು ಅತ್ಯುತ್ತಮ ತಿಳಿವಳಿಕೆಯಿಂದ ಕೂಡಿಲ್ಲದಿದ್ದರೆ ಅವುಗಳನ್ನು ಹೊರಗಿನ ಶಕ್ತಿಗಳು ಕಲುಷಿತಗೊಳಿಸುತ್ತವೆ. ಅದು ಸಾಮಾನ್ಯ ಮನುಷ್ಯರಲ್ಲಿ ಇರುವುದಿಲ್ಲ. ಅದು ವಿಕಾಸಗೊಳ್ಳಲು ತಲೆಮಾರುಗಳೇ ಬೇಕಾಗುತ್ತವೆ. ಆದ್ದರಿಂದ ಸಾಮಾಜಿಕ ಒಳಿತಿಗಾಗಿ ಕೆಲಸ ಮಾಡಲು ಜನರ ಮೇಲೆ ಒತ್ತಾಯವನ್ನು ಹೇರಬೇಕಾಗುತ್ತದೆ ಇದನ್ನು ಬಂಡವಾಳಗಾರರು ಮಾಡಲು ಒಪ್ಪುವುದಿಲ್ಲ. ಆದ್ದರಿಂದ ಶ್ರಮಜೀವಿ ವರ್ಗವೇ ತನ್ನ ಸರ್ವಾಧಿಕಾರವನ್ನು ಸ್ಥಾಪಿಸಿ ಇದನ್ನು ನೆರವೇರಿಸಬೇಕಾಗುತ್ತದೆ. ಬಲವಂತ ಪಡಿಸುವುದು ಸಹ ಎಲ್ಲರ ಒಳಿತಿಗಾಗಿ ಕೆಲಸ ಮಾಡುವಂತಹ ಅಭ್ಯಾಸವನ್ನು ಬೆಳೆಸುತ್ತದೆ ಮತ್ತು ಎಲ್ಲವನ್ನು ಕೂಡ ಎಲ್ಲರ ಒಳಿತಿಗಾಗಿ ನಿಯಂತ್ರಿಸುತ್ತದೆ. ಬರಬರುತ್ತಾ ಅಭ್ಯಾಸವೇ ಮೂಲ ಪ್ರವೃತ್ತಿಯಾಗಿ ಬೆಳೆಯುತ್ತದೆ. ಮೂಲ ಪ್ರವೃತ್ತಿಯನ್ನು ಗಳಿಸಿಕೊಂಡನಂತರ ಶ್ರಮಜೀವಿ ವರ್ಗದ ಸರ್ವಾಧಿಕಾರವು, ಅದೊಂದು ತಾತ್ಕಾಲಿಕವಾದ ಹಂತ ಮತ್ತು ಸಾಧನವಾಗಿರುವುದರಿಂದ ಸಹಜವಾಗಿಯೇ ಕಣ್ಮರೆಯಾಗುತ್ತದೆ. . |
| 7. ಅಂತಿಮವಾಗಿ ಅಲ್ಲಿ ದೇವರ ಆರಾಧಕರ ಮತ್ತು ಆತ್ಮಸಾಕ್ಷಿಯ ನಿರ್ದೇಶನಕ್ಕನುಗುಣವಾಗಿ ಬದುಕುವವರ ಸಮಾಜವು ಜನ್ಮ ತಾಳುತ್ತದೆ. | 7. ಅಂತಿಮವಾಗಿ ಹೊರಹೊಮ್ಮುವುದು ಕಾರ್ಮಿಕರ ಸಮಾಜ ಮತ್ತು ಅಲ್ಲಿ ಸೋಮಾರಿಗಳು ಇರುವುದಿಲ್ಲ. ಅಲ್ಲಿ ಎಲ್ಲರೂ ಸಹ ತಮ್ಮ ಮೂಲ ಪ್ರವೃತ್ತಿಗೆ ಅನುಗುಣವಾಗಿ ಎಲ್ಲರ ಸಮಾನ ಒಳಿತಿಗಾಗಿ ಕೆಲಸ ಮಾಡುತ್ತಾರೆ. |

**ಆಕರ**

| **ಟಾಲ್‌ಸ್ಟಾಯ್** | **ಕಾರ್ಲ್ ಮಾರ್ಕ್ಸ್** |
|---|---|

| | |
|---|---|
| ಗಾಂಧಿವಾದ | ಬೋಲ್ಶೆವಿಸಂ ಅಥವಾ ಲೆನಿನ್   ವಾದ |

| | |
|---|---|
| **ಕಾರ್ಯಕ್ಷೇತ್ರ** | |
| **ಭಾರತ** | **ರಷ್ಯಾ** |

*****